ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 28, 2021

ಸಂಪುಟ : 47 ಸಂಚಿಕೆ : 269 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



ಚಿತ್ರ: ರಫೀಕ್, ಜನತಾವಾಣಿ

**ಖಾಲಿ ಕೆರೆಯಲ್ಲಿ ರಿವರ್ಟರ್ನ್ ಬೇಟೆ**

ಖಾಲಿಯಾಗಿರುವ ಕುಂದುವಾಡ ಕೆರೆಯಲ್ಲಿ ರಿವರ್ಟರ್ನ್ ಪಕ್ಷಿಗಳು ಮೀನುಗಳ ಬೇಟೆ ಅರಸುತ್ತಿದೆ. ಕೆರೆಯ ಕಾಮಗಾರಿ ನಡೆಯುತ್ತಿರುವ ಕಾರಣ, ಈಗ ಬಸಿ ನೀರು ಮಾತ್ರ ಉಳಿದುಕೊಂಡಿದೆ.

# ರೈತ ಸಂಘಟನೆಗಳಲ್ಲಿ ಒಡಕು

## ಹಿಂಸಾಚಾರದ ನಂತರ ಪ್ರತಿಭಟನೆಯಿಂದ ಹಿಂದಕ್ಕೆ ಸರಿದ ಎರಡು ರೈತ ಸಂಘಟನೆಗಳು

## 37 ರೈತ ಮುಖಂಡರ ವಿರುದ್ಧ ಎಫ್.ಐ.ಆರ್ ದಾಖಲು, 200ಕ್ಕೂ ಹೆಚ್ಚು ಜನರ ಬಂಧನ

ನವದೆಹಲಿ, ಜ. 27 – ದೆಹಲಿಯಲ್ಲಿ ಹಿಂಸಾತ್ಮಕ ಟ್ರ್ಯಾಕ್ಟರ್ ಪರೇಡ್ ನಂತರ ರೈತ ಮುಖಂಡರಲ್ಲಿ ಒಡಕು ಕಾಣಿಸಿಕೊಂಡಿದ್ದು, ಎರಡು ಸಂಘಟನೆಗಳು ಪ್ರತಿಭಟನೆಯಿಂದ ಹಿಂದೆ ಸರಿದಿವೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಎರಡು ತಿಂಗಳಿನಿಂದ 41 ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದವು.

ಗಣರಾಜ್ಯೋತ್ಸವದ ದಿನ ನಡೆಸಲಾದ ಟ್ರ್ಯಾಕ್ಟರ್ ಪರೇಡ್‌ನಲ್ಲಿ ನಡೆದ ತೀವ್ರ ಹಿಂಸಾಚಾರದಲ್ಲಿ 300ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದರು. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇದುವರೆಗೂ 22 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ ಹಾಗೂ 200ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಹಿಂಸಾಚಾರ ನಡೆಸಿದವರನ್ನು ವಿಡಿಯೋಗಳು ಹಾಗೂ ಸಿಸಿಟಿವಿಗಳ ಮೂಲಕ ಗುರುತಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಕೇಶ್ ಟಿಕಾಯತ್, ಯೋಗೇಂದ್ರ ಯಾದವ್, ದರ್ಶನ್ ಪಾಲ್ ಹಾಗೂ ಗುರ್ನಾಮ್ ಸಿಂಗ್ ಚಡುನಿ ಸೇರಿದಂತೆ 37 ಜನರ ಹೆಸರುಗಳನ್ನು ಎಫ್.ಐ.ಆರ್.ನಲ್ಲಿ ಸೇರಿಸಲಾಗಿದೆ. ಸಮಯಪುರ್ ಬದ್ಲಿಯಲ್ಲಿ 37 ರೈತ ಮುಖಂಡರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದ್ದು, ಅವರ ಪಾತ್ರದ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ತಮ್ಮ ಪ್ರತಿಭಟನೆ ಶಾಂತಿಯುತವಾಗಿತ್ತು. ಸಮಾಜ ವಿರೋಧಿಗಳು ಸೇರಿಕೊಂಡು ಹಿಂಸೆ ನಡೆಸಿದ್ದಾರೆ ಎಂದು ಹಲವಾರು ರೈತ ಮುಖಂಡರು ಹೇಳಿದ್ದಾರೆ. ಆದರೆ, ಹಿಂಸಾತ್ಮಕ ಘಟನೆಗಳ ಹಿನ್ನೆಲೆಯಲ್ಲಿ (2ನೇ ಪುಟಕ್ಕೆ)

### ತನಿಖೆಗೆ ಸುಪ್ರೀಂಗೆ ಅರ್ಜಿ

ನವದೆಹಲಿ ಜ. 274 - ದೆಹಲಿಯಲ್ಲಿ ನಡೆದ ರೈತರ ಹಿಂಸಾಚಾರದ ಘಟನೆಯ ತನಿಖೆಗಾಗಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಹಿಂಸೆಗೆ ಕಾರಣರಾದ ವ್ಯಕ್ತಿಗಳು ಇಲ್ಲವೇ ಸಂಘಟನೆಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲು ಸಂಬಂಧಿಸಿದವರಿಗೆ ನಿರ್ದೇಶನ ನೀಡಬೇಕು ಎಂದೂ ಕೋರಲಾಗಿದೆ. ವಕೀಲ ವಿಶಾಲ್ ತಿವಾರಿ ಎಂಬುವವರು ಅರ್ಜಿ ದಾಖಲಿಸಿದ್ದು, ಕಾಲ ಮಿತಿಯಲ್ಲಿ ನ್ಯಾಯಿಕ ತನಿಖೆ ನಡೆಸಬೇಕು ಎಂದು ಕೋರಿದ್ದಾರೆ.

### ಮಾತುಕತೆ ಬಾಗಿಲು ಮುಚ್ಚಿಲ್ಲ : ಕೇಂದ್ರ

ನವದೆಹಲಿ ಜ. 27 – ದೆಹಲಿಯಲ್ಲಿ ಟ್ರ್ಯಾಕ್ಟರ್ ಪರೇಡ್ ವೇಳೆ ರೈತರು ಅಭೂತಪೂರ್ವ ಹಿಂಸಾಚಾರ ನಡೆಸಿದ್ದರೂ ಸಹ, ಮಾತುಕತೆಯ ಬಾಗಿಲು ಮುಚ್ಚುವುದಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮಾತುಕತೆಯ ಬಾಗಿಲು ಮುಚ್ಚಿವೆ ಎಂದು ನಾವೆಂದೂ ಹೇಳಿಲ್ಲ. ಮಾತುಕತೆ ಯಾವಾಗಲೇ ನಡೆದರೂ ನಾವು ನಿಮಗೆ ತಿಳಿಸುತ್ತೇವೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಕೇಂದ್ರ ಸಂಪುಟ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ. ಮಂಗಳವಾರ (5ನೇ ಪುಟಕ್ಕೆ)

# ಹರಿಹರ ವಸಾಹತು ಉದ್ಯಮಿಗಳಿಗೆ ಹಕ್ಕು ಪತ್ರ

## ಹದಿನೈದು ದಿನಗಳಲ್ಲಿ ನಾನೇ ಹಕ್ಕು ಪತ್ರ ವಿತರಿಸುವೆ : ಸಚಿವ ಜಗದೀಶ ಶೆಟ್ಟರ್

ದಾವಣಗೆರೆ, ಜ. 27 - ಹರಿಹರದ ಕೆ.ಎಸ್.ಎಸ್.ಐ.ಡಿ.ಸಿ. ವಸಾಹತು ಪ್ರದೇಶದ 120 ಘಟಕಗಳ ಮಾಲೀಕರಿಗೆ ಕೈಗಾರಿಕಾ ಪ್ಲಾಟ್‌ಗಳ ಕ್ರಯ ಪತ್ರವನ್ನು ಇನ್ನೂ ಹದಿನೈದು ದಿನಗಳಲ್ಲಿ ವಿತರಿಸಲು ಕ್ರಮ ತೆಗೆದುಕೊಳ್ಳುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುವಾಗ, ಅವರು ಈ ಸೂಚನೆ ನೀಡಿದ್ದಾರೆ.

ಬುಧವಾರವಷ್ಟೇ ಈ ಆಸ್ತಿ ಕೆ.ಎಸ್.ಎಸ್.ಐ.ಡಿ.ಸಿ. ಹೆಸರಿಗೆ ಬದಲಾಗಿದೆ. ಇನ್ನೊಂದು ವಾರದಲ್ಲಿ ಆಸ್ತಿಗಳ ಪೋಡಿ ಕ್ರಮ ತೆಗೆದುಕೊಳ್ಳಬೇಕು. ಹದಿನೈದು ದಿನಗಳಲ್ಲಿ ಕ್ರಯಪತ್ರ ವಿತರಣೆ ಆಗಬೇಕು. ನಾನೇ ಕ್ರಯಪತ್ರಗಳನ್ನು ಹರಿಹರಕ್ಕೆ ಬಂದು ವಿತರಿಸುತ್ತೇನೆ ಎಂದು ಶೆಟ್ಟರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಈ ಸಮಸ್ಯೆ ನೆನೆಗುದಿಯಲ್ಲಿತ್ತು.

ಇದೇ ಸಂದರ್ಭದಲ್ಲಿ ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್ ದೀಪ, ರಸ್ತೆ ಹಾಗೂ ಚರಂಡಿಯ ಸಮಸ್ಯೆಗಳಿರುವ ಬಗ್ಗೆ ಉದ್ಯಮಿ ಮುದೇಗೌಡ್ರು ದೂರಿದರು.

ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಶೆಟ್ಟರ್, ಕೈಗಾರಿಕೋದ್ಯಮಿಗಳೂ ಸಹ ನಗರಸಭೆಗೆ ಕಳೆದ ಎಂಟು ವರ್ಷಗಳಿಂದ ಹೊಂದಿರುವ ಬಾಕಿಯನ್ನು ಹಂತ ಹಂತವಾಗಿ ತೀರಿಸಬೇಕು (2ನೇ ಪುಟಕ್ಕೆ)



### ದಾವಣಗೆರೆಗೆ ಕೈಗಾರಿಕೆಗಳನ್ನು 'ದೂಡುತ್ತಿದ್ದೇವೆ' : ಶೆಟ್ಟರ್

ದಾವಣಗೆರೆ, ಜ. 27 - ಬೆಂಗಳೂರಿನಲ್ಲಿ ಕೈಗಾರಿಕೆಗಳು ಮಿತಿ ಮೀರಿವೆ. ಹೀಗಾಗಿ ಯಾರಾದರೂ ಬೆಂಗಳೂರಿನಲ್ಲಿ ಕೈಗಾರಿಕೆ ಸ್ಥಾಪಿಸುತ್ತೇವೆ ಎಂದರೆ ದಾವಣಗೆರೆಯಂತಹ ಎರಡನೇ ಹಾಗೂ ಮೂರನೇ ಹಂತದ ನಗರಗಳಿಗೆ ದೂಡುತ್ತಿದ್ದೇವೆ ಎಂದು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕೈಗಾರಿಕೆಗಳು ಪ್ರಸಕ್ತ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿವೆ. ಬೆಂಗಳೂರಿನಲ್ಲಿ ಕೈಗಾರಿಕಾ ಹೊರೆ (2ನೇ ಪುಟಕ್ಕೆ)

### ಕೈಗಾರಿಕೆಗಳಿಗೆ ನೇರ ವಿದ್ಯುತ್

ಕೈಗಾರಿಕೆಗಳು ಇನ್ನು ಮುಂದೆ ಸೌರ ವಿದ್ಯುತ್ ಉತ್ಪಾದಕರಿಂದ ನೇರವಾಗಿ ವಿದ್ಯುತ್ ಖರೀದಿಸಲು ಅವಕಾಶ ಮಾಡಿಕೊಡಲಾಗುವುದು ಎಂದು ಕೆಎಸ್‌ಎಸ್‌ಐಡಿಸಿ ವ್ಯವಸ್ಥಾಪಕ ನಿರ್ದೇಶಕ ರಾಮ್ ಪ್ರಸಾದ್ ತಿಳಿಸಿದ್ದಾರೆ. ಕೈಗಾರಿಕಾ ಒಕ್ಕೂಟಗಳು ಉತ್ಪಾದಕರಿಂದ ವಿದ್ಯುತ್ ಖರೀದಿ ಒಪ್ಪಂದ (ಪಿಪಿಎ)ದ ಮೂಲಕ ವಿದ್ಯುತ್ ಖರೀದಿಸಬಹುದು. ಇದರಿಂದಾಗಿ ವಿದ್ಯುತ್ ವೆಚ್ಚ ಕಡಿಮೆಯಾಗಲಿದೆ ಎಂದವರು ಹೇಳಿದ್ದಾರೆ.

### ನೋಟಿಸ್ ಕೊಡಬೇಡಿ, ಸಮಸ್ಯೆಗಳಿಗೆ ಸ್ಪಂದಿಸಿ

ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರಿ ಇಲಾಖೆಗಳು ಕಾರ್ಯ ನಿರ್ವಹಿಸಬೇಕು. ಕೈಗಾರಿಕೆಗಳಿಗೆ ನೋಟಿಸ್ ಕೊಡಲು ಸರ್ಕಾರ ಇಲಾಖೆಗಳನ್ನು ರೂಪಿಸಿಲ್ಲ ಎಂದು ಬೃಹತ್ ಮತ್ತು (5ನೇ ಪುಟಕ್ಕೆ)

# ನೂರರ ಗಡಿ ದಾಟಿದ ಪೆಟ್ರೋಲ್

ನವದೆಹಲಿ, ಜ. 27 – ಬ್ರ್ಯಾಂಡೆಡ್ ಪೆಟ್ರೋಲ್ ದರ ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಲೀಟರ್‌ಗೆ 100 ರೂ.ಗಳ ಗಡಿ ದಾಟಿದೆ. ಬುಧವಾರದಂದು ಸತತ ಎರಡನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಸಿದ ನಂತರ ತೈಲ ಬೆಲೆ ದಾಖಲೆ ಮಟ್ಟಕ್ಕೆ ಹೋಗಿದೆ.

**ರಾಜಸ್ಥಾನದಲ್ಲಿ ಬ್ರ್ಯಾಂಡೆಡ್ ಪೆಟ್ರೋಲ್ 101.15 ರೂ.**

ಬುಧವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 25 ಪೈಸೆ ಹೆಚ್ಚಿಸಲಾಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರ್‌ಗೆ 86.30 ರೂ. ಆಗಿದ್ದರೆ, ಡೀಸೆಲ್ ದರ ಲೀಟರ್‌ಗೆ 76.23 ರೂ. ಆಗಿದೆ.

ಶ್ರೀಗಂಗಾನಗರದಲ್ಲಿ ಸಾಮಾನ್ಯ ಪೆಟ್ರೋಲ್ ಬೆಲೆ ಲೀಟರ್‌ಗೆ 98.40 ರೂ. ಆಗಿದ್ದರೆ, ಬ್ರ್ಯಾಂಡೆಡ್ ಪೆಟ್ರೋಲ್ (5ನೇ ಪುಟಕ್ಕೆ)

# ಆಪ್‌ನಲ್ಲೇ ಪಿಂಚಣಿ ಯೋಜನೆಗೆ ಸಿಎಂ ಚಾಲನೆ

ಬೆಂಗಳೂರು, ಜ.27 - ಸರ್ಕಾರದ ಸವಲತ್ತುಗಳು ಮಧ್ಯ ವರ್ತಿಗಳ ಹಾವಳಿ ಇಲ್ಲದೆ ಫಲಾನುಭವಿಗಳಿಗೆ ತಲುಪಿಸಲು ಶ್ರಮವಹಿಸಿ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಕರೆ ನೀಡಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿಂದು ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ ಮನೆ ಬಾಗಿಲಿಗೆ ಮಾಸಾಶನ ಅಭಿಯಾನಕ್ಕೆ ಚಾಲನೆ ನೀಡಿ, ಇದರ ತಂತ್ರಾಂಶವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಬಡವರಿಗೆ ಮತ್ತು ಅರ್ಹರಿಗೆ ಸರ್ಕಾರದ ಸವಲತ್ತುಗಳು ನೇರವಾಗಿ (4ನೇ ಪುಟಕ್ಕೆ)

# ಕೇಂದ್ರದಿಂದ ಕೊರೊನಾ ಹೊಸ ಮಾರ್ಗಸೂಚಿ

## ಈಜುಕೊಳ, ಚಿತ್ರಮಂದಿರ ಹೆಚ್ಚು ಮುಕ್ತ

ನವದೆಹಲಿ, ಜ. 27 – ಕೊರೊನಾ ತೀವ್ರತೆ ತಗ್ಗಿರುವ ಹಿನ್ನೆಲೆಯಲ್ಲಿ ಫೆಬ್ರವರಿ 1ರಿಂದ ಜಾರಿಗೆ ಬರುವಂತೆ ಹೊಸ ಮಾರ್ಗಸೂಚಿಗಳನ್ನು ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ. ಇದರ ಅನ್ವಯ ಈಜುಕೊಳವನ್ನು ಹೆಚ್ಚು ಮುಕ್ತವಾಗಿಸುವ ಜೊತೆಗೆ, ಚಿತ್ರಮಂದಿರಗಳ ಮೇಲಿನ ನಿರ್ಬಂಧಗಳನ್ನು ಸಡಿಲಿಸಲಾಗಿದೆ.

ರಾಜ್ಯದೊಳಗೆ ಹಾಗೂ ಅಂತರರಾಜ್ಯ ಪ್ರಯಾಣ ಹಾಗೂ ಸರಕು ಸಾಗಣೆಯ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. ನೆರೆ ದೇಶಗಳ ಜೊತೆಗೆ ಭೂ ಮಾರ್ಗದ ಮೂಲಕ ವ್ಯಾಪಾರಕ್ಕೂ ನಿರ್ಬಂಧಗಳಿರುವುದಿಲ್ಲ.

ಸಿನಿಮಾ ಮಂದಿರಗಳಲ್ಲಿ ಶೇ.50ರಷ್ಟು ಸಾಮರ್ಥ್ಯದ ಜನರಿಗೆ ಅವಕಾಶ ನೀಡಲಾಗಿತ್ತು. ಇದನ್ನು ಹೆಚ್ಚಿಸಲೂ ಸಹ ಅವಕಾಶ ಮಾಡಿಕೊಡಲಾಗಿದೆ. ಇದಕ್ಕೆ ಪ್ರತ್ಯೇಕ ಮಾರ್ಗಸೂಚಿ ಪ್ರಕಟಿಸಲಾಗುವುದು.

ಕ್ರೀಡಾಪಟುಗಳು ಈಜುಕೊಳ ಬಳಸಲು ಅನುಮತಿ ಇತ್ತು. ಈಗ ಎಲ್ಲರಿಗೂ ಈಜುಕೊಳ ಬಳಸುವ ಅವಕಾಶ (2ನೇ ಪುಟಕ್ಕೆ)

# ಬಿಜೆಪಿ ವಲಸಿಗರ 'ಹಠಾವೋ' ಅಭಿಯಾನ

## ಜಾರಕಿಹೊಳಿ, ಸುಧಾಕರ್, ಯೋಗೇಶ್ವರ್ ಕೈ ಬಿಡಲು ಒತ್ತಡ

ಬೆಂಗಳೂರು, ಜ. 27 - ಜಲ ಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್, ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರನ್ನು ಸಂಪುಟದಿಂದ ಕೈಬಿಡಬೇಕೆಂದು ಮೂಲ ಬಿಜೆಪಿ ಶಾಸಕರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

ಬೆದರಿಕೆಗಳನ್ನೊಡ್ಡಿ ಖಾತೆ ಮತ್ತು ಸಚಿವ ಸ್ಥಾನ ಪಡೆಯುವ ಇಂತಹವರು ಬಿಜೆಪಿ ಸರ್ಕಾರದಲ್ಲಿರಬಾರದು. ಇವರನ್ನು ಮೊದಲು ಮಂತ್ರಿಮಂಡಲದಿಂದ ಕೈಬಿಡಿ, ಇಲ್ಲದಿದ್ದರೆ ಮುಂದಾಗುವ ಅನಾಹುತಗಳಿಗೆ ನೀವೇ ಹೊಣೆಗಾರಿಕೆ ಹೊರಬೇಕಾಗುತ್ತದೆ ಎಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಲು ನಿರ್ಧರಿಸಿದ್ದಾರೆ.

ಮೂವರು ಸಚಿವರನ್ನು ಹಠಾವೋ ಮಾಡುವ ಉದ್ದೇಶದಿಂದ ನಿನ್ನೆ ರಾತ್ರಿ ಖಾಸಗಿ ಹೋಟೆಲ್‌ನಲ್ಲಿ ಸೇರಿದ್ದ ಈ ಶಾಸಕರು ಶುಕ್ರವಾರ ರಾತ್ರಿ ಯಲಹಂಕ ಬಳಿ ರೆಸಾರ್ಟ್‌ನಲ್ಲಿ ಬಂಡಾಯದ ಸಭೆ ನಡೆಸಲು ತೀರ್ಮಾನಿಸಿದ್ದಾರೆ.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ರೇಣುಕಾಚಾರ್ಯ ಈ ಸಭೆಯ ನೇತೃತ್ವ ವಹಿಸುತ್ತಿದ್ದು, ಮಧ್ಯ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಬಹುತೇಕ ಬಿಜೆಪಿ ಶಾಸಕರು ಅಂದಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಇವರ ಕೂಗಿಗೆ ಆರ್‌ಎಸ್‌ಎಸ್ ಮೂಲದ (4ನೇ ಪುಟಕ್ಕೆ)

### ಬಂಡಾಯ ಸಭೆಗೆ 20ಕ್ಕೂ ಹೆಚ್ಚು ಶಾಸಕರು

ರೇಣುಕಾಚಾರ್ಯ ಆಯೋಜಿಸುತ್ತಿರುವ ಬಂಡಾಯ ಸಭೆಗೆ ಡಾ. ಶಿವರಾಜ್ ಪಾಟೀಲ್, ರಾಜುಗೌಡ ಕಾಗೆ, ಶಿವನಗೌಡ ನಾಯಕ್, ಶಂಕರ್ ಪಾಟೀಲ್ ಮುನಿಕೊಪ್ಪ, ಪೂರ್ಣಿಮ, ಗೂಳಿಹಟ್ಟಿ ಶೇಖರ್, ಚಂದ್ರಪ್ಪ, ತಿಪ್ಪಾರೆಡ್ಡಿ, ಕರುಣಾಕರ್ ರೆಡ್ಡಿ, ದತ್ತಾತ್ರೇಯ ಪಾಟೀಲ್ ರೇವೂರ ಸೇರಿದಂತೆ 20ಕ್ಕೂ ಹೆಚ್ಚು ಶಾಸಕರು ಅಂದಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಪುಟಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿರುವ ಆನಂದ್‌ಸಿಂಗ್ ಕೂಡ ಇವರ ಹೋರಾಟ ಬೆಂಬಲಿಸಿದ್ದಾರೆ ಎನ್ನಲಾಗಿದೆ.

### ರಾಜೀನಾಮೆಗೆ ಮುಂದಾದ ಸಚಿವ ಆನಂದ್ ಸಿಂಗ್

ಬೆಂಗಳೂರು, ಜ. 27 - ಖಾತೆ ಹಂಚಿಕೆಯಿಂದ ಅಸಮಾಧಾನಗೊಂಡಿರುವ ಮೂಲಸೌಕರ್ಯ ಮತ್ತು ವಕ್ಫ್ ಸಚಿವ ಆನಂದಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಾರೆ. ನಿನ್ನೆ ರಾತ್ರಿಯೇ ಮುಖ್ಯಮಂತ್ರಿಯವರನ್ನು ಭೇಟಿ (2ನೇ ಪುಟಕ್ಕೆ)

# 4 ವರ್ಷಗಳ ಜೈಲಿನ ನಂತರ ಶಶಿಕಲಾ ಬಿಡುಗಡೆ



**ಸಿಹಿ ಹಂಚಿ ಸಂಭ್ರಮಿಸಿದ ಬೆಂಬಲಿಗರು**

ಬೆಂಗಳೂರು, ಜ. 27 – ಭ್ರಷ್ಟಾಚಾರಕ್ಕೆ ಸಿಲುಕಿ ನಾಲ್ಕು ವರ್ಷ ಜೈಲು ಶಿಕ್ಷೆ ಅನುಭವಿಸಿದ ನಂತರ ಉಚ್ಛಾಟಿತ ಎ.ಐ.ಎ.ಡಿ.ಎಂ.ಕೆ ನಾಯಕಿ ವಿ.ಕೆ. ಶಶಿಕಲಾ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಕೊರೊನಾ ಸೋಂಕಿನ ನಂತರ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅಲ್ಲಿ ಬಿಡುಗಡೆಯ ಔಪಚಾರಿಕತೆಯನ್ನು ಪೂರ್ಣಗೊಳಿಸಲಾಗಿದೆ.

ಪಿಪಿಇ ಕಿಟ್ ಧರಿಸಿದ್ದ ಜೈಲಿನ ಅಧಿಕಾರಿಗಳು, ಬಿಡುಗಡೆಯ ಔಪಚಾರಿಕತೆಯನ್ನು ಆಸ್ಪತ್ರೆಯ ಕೊರೊನಾ ವಾರ್ಡ್ ಒಳಗೆ ಪೂರ್ಣಗೊಳಿಸಿದ್ದಾರೆ. ಬಿಡುಗಡೆಯಾದರೂ ಸಹ ಕೊರೊನಾ ಶಿಷ್ಟಾಚಾರದ ಅನ್ವಯ ಅವರು ಇನ್ನೂ (2ನೇ ಪುಟಕ್ಕೆ)

## ಆರನೇ ವರ್ಷದ ಪುಣ್ಯಸ್ಮರಣೆ



ಲಿಂ॥ ಹೆಚ್.ಡಿ. ಶೇಖರಪ್ಪನವರು
ನಿವೃತ್ತ ಮುಖ್ಯೋಪಾಧ್ಯಾಯರು, ಅತ್ತಿಗೆರೆ
ಜನನ : 03-09-1945 ನಿಧನ : 28.01.2015

ಲಿಂ॥ ಶ್ರೀಮಾನ್
ಹೆಚ್.ಡಿ. ಶೇಖರಪ್ಪನವರು
ಅತ್ತಿಗೆರೆ.

ಭೂಮಿಯಲ್ಲಿ ಚಿನ್ನವಡಗಿರುವಂತೆ
ತಂತಿಯಲಿ ಶೃತಿ ಸೇರಿರುವಂತೆ
ಹಾಲಿನಲಿ ಬೆಣ್ಣೆ ಬೆರೆತಿರುವಂತೆ
ಕಬ್ಬಿನಲಿ ಸಿಹಿ ಮಿಳಿತವಾಗಿರುವಂತೆ
ಎನ್ನೊಳು ನೀವು ಅಡಗಿರುವಂತೆ
ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು:
ಪತ್ನಿ: ಶ್ರೀಮತಿ ಸುನಂದಾದೇವಿ
ಹಾಗೂ ಕುಟುಂಬ ವರ್ಗದವರು

## ಏಳನೇ ವರ್ಷದ ಚಿರಸ್ಮರಣೆ



ದಿ. ಶ್ರೀ ಸಿ. ಪಾಂಡುರಂಗ
ಜನನ : 01.07.1942 ನಿಧನ : 28.01.2014

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಬಿ. ವನಜಾಕ್ಷಮ್ಮ
ಮಕ್ಕಳು : ಡಾ. ಎಸ್.ಪಿ. ಮುರುಳೀಧರ
ಎಸ್.ಪಿ. ಶ್ರೀಧರ, ಡಾ. ಎಸ್.ಪಿ. ಮಧು
ಮತ್ತು ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು.

# ಪ್ರತಿಯೊಬ್ಬರಿಗೂ ಸೂರು : ಎರಡು ಕೋಟಿ ಮನೆಗಳಿಗೆ ಪ್ರಸ್ತಾವನೆ

## ಹರಪನಹಳ್ಳಿ ತಾಲ್ಲೂಕಿನ ಅಭಿವೃದ್ಧಿ ಕಾಮಗಾರಿಗಳ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ



ಹರಪನಹಳ್ಳಿ, ಜ.27 - ಪ್ರತಿಯೊಬ್ಬರಿಗೂ ಸೂರು ಕಲ್ಪಿಸುವ ಸಲುವಾಗಿ ಮೊದಲನೇ ಹಂತದಲ್ಲಿ ದೇಶದಲ್ಲಿ 2 ಕೋಟಿ ಮನೆಗಳನ್ನು ನಿರ್ಮಿಸಲು ಮುಂದಾಗಿದ್ದು, ರಾಜ್ಯಕ್ಕೆ ಸಿಂಹಪಾಲು ಪಡೆದುಕೊಂಡಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ತಾಲ್ಲೂಕಿನ ಗೌರಿಹಳ್ಳಿ ಗ್ರಾಮದಲ್ಲಿ 13.55 ಕೋಟಿ ವೆಚ್ಚದಲ್ಲಿ 17.82 ಕಿ.ಮೀ ರಸ್ತೆ ನಿರ್ಮಾಣ ಕಾಮಗಾರಿ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಹೊಳಲು ರಸ್ತೆಯಿಂದ ಗೌರಿಹಳ್ಳಿ, ಅಲಮರಸಿಕೇರಿ ಮಾಡ್ಲಿಗೇರಿ, ಕನ್ನನಾಯಕನಹಳ್ಳಿ ಸೇರಿದಂತೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಒಟ್ಟು 17.82 ಕಿ.ಮೀ ಉದ್ದದ ಸುಸಜ್ಜಿತ ರಸ್ತೆ ನಿರ್ಮಾಣವಾಗಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮಗಳ ಅಭಿವೃದ್ದಿಗೆ ಹಾಗೂ ಪರಿಶಿಷ್ಟ ಜಾತಿ ಪಂಗಡಗಳ ಕಾಲೋನಿಗಳಿಗೆ ಸಿಸಿ ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಬಂದಿದ್ದು, ಹಂತ ಹಂತವಾಗಿ ಅಭಿವೃದ್ದಿ ಮಾಡಲಾಗುವುದು ಎಂದವರು ಹೇಳಿದರು.

ಕೋವಿಡ್ ವ್ಯಾಕ್ಸಿನ್ ರಾಜ್ಯದಲ್ಲಿ 3 ಲಕ್ಷ ಜನರಿಗೆ ಲಸಿಕೆ ನೀಡಲಾಗಿದ್ದು, ಇದನ್ನು ವಿರೋಧ ಪಕ್ಷದವರ ಮಾಡುವ ಅಪಪ್ರಚಾರಕ್ಕೆ ಕಿವಿಗೊಡದೇ ಪ್ರತಿಯೊಬ್ಬರು ಲಸಿಕೆಯನ್ನು ಪಡೆದುಕೊಳ್ಳಲು ಮುಂದಾಗಿ ರಸ್ತೆ ಕಾಮಗಾರಿ ಕಳಪೆ ಕಂಡುಬಂದಲ್ಲಿ ಗ್ರಾಮಸ್ಥರು ಉದಾಸೀನತೆ ತೋರದೆ ಕೂಡಲೇ ಶಾಸಕ ಮತ್ತು ಸಂಸದರ ಗಮನಕ್ಕೆ ತಂದಲ್ಲಿ, ನಾವೇ ನಿಂತಿದ್ದು, ಗುಣಮಟ್ಟದ ಕಾಮಗಾರಿ ನಿರ್ಮಾಣ ಮಾಡುವವರೆಗೂ ತಡೆಹಿಡಿಯುತ್ತೇವೆ ಎಂದು ಸಿದ್ದೇಶ್ವರ ಅವರು ತಿಳಿಸಿದರು.

ಶಾಸಕ ಜಿ.ಕರುಣಾಕರ ರೆಡ್ಡಿ ಮಾತನಾಡಿ, ತಾಲ್ಲೂಕಿನಲ್ಲಿ ಕೆ.ಕೆ.ಆರ್.ಡಿ ಯೋಜನೆಯಡಿ 17ಕೋಟಿ ಅನುದಾನ ಮಂಜೂರಾಗಿದ್ದು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೊಠಡಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಅಂಗನವಾಡಿ ಕೇಂದ್ರ ಶಾಲಾ ಶೌಚಾಲಯಗಳಿಗೆ ಕಲ್ಯಾಣ ಕರ್ನಾಟಕ ಅಭಿವೃದ್ದಿ ಮಂಡಳಿಯಿಂದ ಅನೇಕ ಕಾಮಗಾರಿಗಳನ್ನು ನಿರ್ಮಾಣ ಮಾಡಲಾಗಿದೆ ತಾಲ್ಲೂಕಿನ 110 ಗ್ರಾಮಗಳಿಗೆ ಕೆರೆ ನೀರು ತಲುಪಿಸುವ ವ್ಯವಸ್ಥೆ ಮಾಡಲಾಗಿದೆ, ನೂತನ ಗ್ರಾಮ ಪಂಚಾಯ್ತಿ ಸದಸ್ಯರುಗಳು ನರೇಗಾ ಯೋಜನೆಯಡಿ ಕೆರೆಗಳನ್ನು ಹೂಳೆತ್ತಿಸಲು ಮುಂದಾದರೆ, ನೀರು ತುಂಬಿಸಲು ಅನುಕೂವಾಗುತ್ತದೆ, ಹೆಚ್ಚಿನದಾಗಿ ಅನುದಾನ ತರಲು ಸಿದ್ದನಿದ್ದೇನೆ ಎಂದ ಅವರು ತಾಲ್ಲೂಕಿನಲ್ಲಿ ಜಲಜೀವನ ಯೋಜನೆ ಟೆಂಡರ್ ಹಂತದಲ್ಲಿದೆ, ದೇವಸ್ಥಾನಗಳ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಹೆಚ್ಚಿನ ಅನುದಾನಕ್ಕಾಗಿ ಮುಖ್ಯಮಂತ್ರಿಗಳ ಬಳಿ ಬೇಡಿಕೆ ಇಟ್ಟಿದ್ದೇನೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷೆ ಅನ್ನಪೂರ್ಣಮ್ಮ, ಉಪಾಧ್ಯಕ್ಷ ಎಲ್. ಮಂಜನಾಯ್ಕ್, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತಕರ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಪಂಚಾಯಿತಿ ಸದಸ್ಯ ವೈ.ಬಸಪ್ಪ, ನಾಗರಾಜ್, ಪುರಸಭೆ ಸದಸ್ಯ ಎಂ.ಕೆ. ಜಾವೀದ್, ಕಿರಣ್ ಕುಮಾರ್, ಮುಖಂಡರಾದ ಎಂ.ಪಿ ನಾಯ್ಕ್, ಶಿವಾನಂದ, ಗೌಳಿ ಕೊಟ್ರೇಶ್, ತಿಪ್ಪೇಶ್, ರವಿ, ಗೌಳಿ ಬಸವರಾಜ್, ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಬನಶಂಕರಿ ದೇವಿ ಬನದ ಹುಣ್ಣಿಮೆ ಉತ್ಸವ

ಹಳೇಬೇತೂರು ರಸ್ತೆಯ ಶ್ರೀ ಬನಶಂಕರಿದೇವಿ ದೇವಾಂಗ ಸಮಾಜ ಸಂಘದ ವತಿಯಿಂದ ಬನದ ಹುಣ್ಣಿಮೆ ಅಂಗವಾಗಿ ಶ್ರೀ ಬನಶಂಕರಿ ದೇವಿಗೆ ಇಂದು ಬೆಳಿಗ್ಗೆ 4 ಗಂಟೆಗೆ ದೀಪಾರಾಧನೆ, ನಂತರ ಪಂಚಾಮೃತ ಅಭಿಷೇಕ, ದೇವಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗುವುದು. ನಂತರ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿದೆ.

ಸಂಜೆ 6 ಗಂಟೆಗೆ ರಥೋತ್ಸವ ಬದಲಾಗಿ ಪಾಲ್ಕಿ ಉತ್ಸವ ಕಾರ್ಯಕ್ರಮ, ಸರಳ ಜಾನಪದ ಕಲಾಮೇಳಗಳೊಂದಿಗೆ ನಡೆಯಲಿದೆ. ಉತ್ಸವ ಕಾರ್ಯಕ್ರಮಕ್ಕೆ ಮುತ್ತೈದೆಯರು ಆರತಿ ತರಲು ಕೋರಲಾಗಿದೆ. ನಾಳೆ ಶುಕ್ರವಾರ ನಾಳೆ ಬೆಳಿಗ್ಗೆ 10 ಗಂಟೆಗೆ ಅವಭೃತ ಸ್ನಾನವಿರುತ್ತದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಬನೂರು ರಸ್ತೆ, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತ ಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡರಸ್ತೆವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು, ಗುಂಡಿ ಛತ್ರದ ಸುತ್ತ ಮುತ್ತ, ಸದ್ಯೋಜಾತ ಮಠದ ಸುತ್ತಮುತ್ತ, ಕಾಸಲ್ ಶೆಟ್ಟಿ ಪಾರ್ಕ್, ಶಾಮನೂರು ಶಿವಶಂಕರಪ್ಪರವರ ನಿವಾಸದ ಸುತ್ತ ಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ತರಳಬಾಳು ಬಡಾವಣೆ 1 ರಿಂದ 6ನೇ ಕ್ರಾಸ್ ವರೆಗೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹರಿಹರ ವಸಾಹತು ಉದ್ಯಮಿಗಳಿಗೆ ಹಕ್ಕು ಪತ್ರ

**(1ನೇ ಪುಟದಿಂದ)** ಎಂದು ತಾಕೀತು ಮಾಡಿದರು.

**ಟೆಕ್ಸ್‌ಟೈಲ್ ಪಾರ್ಕ್ ಮುಕ್ತ :** ಕರೂರು ಕೈಗಾರಿಕಾ ಪ್ರದೇಶದಲ್ಲಿರುವ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ ಬೇರೆ ಉದ್ಯಮಗಳ ಸ್ಥಾಪನೆಗೆ ಅವಕಾಶ ನೀಡಬೇಕೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಗನೂರು ಟೆಕ್ಸ್‌ಟೈಲ್‌ನ ಮಾಲೀಕ ಗುರುಪಾದಪ್ಪ, ತಮ್ಮ ಜವಳಿ ಘಟಕ ನಷ್ಟಕ್ಕೆ ಗುರಿಯಾಗಿದೆ. ಪ್ಯಾಕೇಜಿಂಗ್ ಘಟಕ ಸ್ಥಾಪಿಸಲು ಸಿದ್ಧನಿದ್ದೇನೆ. ಆದರೆ, ಅನುಮತಿ ಸಿಗದೇ ತೊಂದರೆಯಾಗಿದೆ ಎಂದು ಭಾವುಕರಾಗಿ ಹೇಳಿದರು.

ಈಗಿರುವ ಜವಳಿ ಉದ್ಯಮಗಳಿಗೆ ತೊಂದರೆಯಾಗದ ರೀತಿಯಲ್ಲಿ ಉದ್ಯಮಗಳಿಗೆ ಸೂಕ್ತ ಅವಕಾಶ ನೀಡಬೇಕು. ಇದರಿಂದ ಖಾಲಿ ಉಳಿದಿರುವ ಪ್ಲಾಟ್‌ಗಳ ಬಳಕೆಯಾಗಿ ಜನರಿಗೂ ಕೆಲಸ ಸಿಗುತ್ತದೆ ಎಂದು ಸಚಿವ ಶೆಟ್ಟರ್ ಹೇಳಿದರು.

**ಸಾಲ ಕೊಡಿ :** ಎನ್.ಪಿ.ಎ. ಆಗಿರುವ ಗೋದಾಮಿನಲ್ಲಿ ಮೆಕ್ಕೆಜೋಳದ ಘಟಕ ಸ್ಥಾಪಿಸಲು ಬ್ಯಾಂಕುಗಳು ಸಾಲ ನೀಡುತ್ತಿಲ್ಲ ಎಂದು ಉದ್ಯಮಿ ತುರ್ಚಘಟ್ಟದ ಬಸವರಾಜಪ್ಪ ಸಭೆಗೆ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿದ್ದ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಸುಶ್ರುತ್ ಶಾಸ್ತ್ರಿ ಅವರಿಗೆ ಸೂಚನೆ ನೀಡಿದ ಸಚಿವರು ಕೈಗಾರಿಕೆ ಸ್ಥಾಪಿಸುವವರಿಗೆ ತೊಂದರೆಯಾಗದ ರೀತಿಯಲ್ಲಿ ಸಾಲ ವಿತರಿಸಬೇಕು ಎಂದರು.

**ಕೈಗಾರಿಕೆಗೆ ಯುಜಿಡಿ :** ದಾವಣಗೆರೆ ಕೈಗಾರಿಕಾ ಪ್ರದೇಶದಲ್ಲಿ ಯು.ಜಿ.ಡಿ. ಸೌಲಭ್ಯ ಕಲ್ಪಿಸುವಂತೆ ಉದ್ಯಮಿ ಶಂಭುಲಿಂಗಪ್ಪ ಮನವಿ ಮಾಡಿಕೊಂಡರು.

ಕೆಎಸ್‌ಎಸ್‌ಐಡಿಸಿ ಮೂಲಕ ಸೌಲಭ್ಯ ಕಲ್ಪಿಸಲಾಗುವುದು. ಇದರ ಜೊತೆಗೆ ಒಳಚರಂಡಿ ನೀರನ್ನು ಶುದ್ಧೀಕರಿಸಿ ಕೈಗಾರಿಕೆಗಳಿಗೂ ಬಳಸಿಕೊಳ್ಳುವಂತೆ ಕೆಎಸ್‌ಎಸ್‌ಐಡಿಸಿ ವ್ಯವಸ್ಥಾಪಕ ನಿರ್ದೇಶಕ ರಾಮ ಪ್ರಸಾದ್ ಸೂಚಿಸಿದರು.

ಸಭೆಯಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಕೆಐಎಡಿಬಿ ಅಭಿವೃದ್ಧಿ ಅಧಿಕಾರಿ ಶಿವಕುಮಾರ್, ಗ್ರಾಮಾಂತರ ಕೈಗಾರಿಕೆ ಇಲಾಖೆ ಉಪ ನಿರ್ದೇಶಕ ಮನ್ಸೂರ್, ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಜಯಪ್ರಕಾಶ್ ನಾರಾಯಣ್, ಉಪ ನಿರ್ದೇಶಕ ಮಂಜುನಾಥ್, ಭೂಸ್ವಾಧೀನ ಅಧಿಕಾರಿ ಸರೋಜಾ, ಕೆಎಸ್‌ಎಫ್‌ಸಿ ಪ್ರಧಾನ ವ್ಯವಸ್ಥಾಪಕ ಬಸವರಾಜು, ಜಿಲ್ಲಾ ಪರಿಸರ ಅಧಿಕಾರಿ ಮಹೇಶ್ವರಪ್ಪ, ಉಪ ಜಿಲ್ಲಾ ಪರಿಸರ ಅಧಿಕಾರಿ ಸಂತೋಷ್, ಹರಿಹರ ನಗರಸಭೆ ಆಯುಕ್ತ ಬಿ.ಟಿ. ಉದಯ್ ಕುಮಾರ್, ಕಾರ್ಮಿಕ ಅಧಿಕಾರಿ ಇಬ್ರಾಹೀಂ ಸಾಬ್, ಜವಳಿ ಇಲಾಖೆ ಉಪನಿರ್ದೇಶಕ ಸುರೇಶ್ ಎನ್.ತಡಕನಹಳ್ಳಿ, ಹರಿಹರೇಶ್ವರ ಸಣ್ಣ ಕೈಗಾರಿಕಾ ಮಾಲೀಕರ ಸಂಘದ ಅಧ್ಯಕ್ಷ ಸಿದ್ದನಗೌಡ ಮತ್ತಿತರರು ಉಪಸ್ಥಿತರಿದ್ದರು.

### ದಾವಣಗೆರೆಗೆ ಕೈಗಾರಿಕೆಗಳನ್ನು 'ದೂಡುತ್ತಿದ್ದೇವೆ'

**(1ನೇ ಪುಟದಿಂದ)** ಹೆಚ್ಚಾಗಿದೆ ಎಂದು ಅವರು ತಿಳಿಸಿದರು.

ಬೆಂಗಳೂರು - ಮುಂಬೈ ಮಾರ್ಗವನ್ನು ಕೈಗಾರಿಕಾ ಕಾರಿಡಾರ್ ಆಗಿ ಪರಿವರ್ತಿಸಲಾಗಿದೆ. ತುಮಕೂರಿನಲ್ಲಿ ಈಗಾಗಲೇ ಸಾವಿರಾರು ಕೋಟಿ ರೂ.ಗಳ ಹೂಡಿಕೆಯಾಗುತ್ತಿದೆ. ಇದೇ ಮಾರ್ಗದಲ್ಲಿ ಬರುವ ಚಿತ್ರದುರ್ಗ, ದಾವಣಗೆರೆ ಹಾಗೂ ಹಾವೇರಿಗಳಲ್ಲೂ ಕೈಗಾರಿಕೆಗಳು ಸ್ಥಾಪನೆಯಾಗಲಿವೆ ಎಂದರು.

ದಾವಣಗೆರೆ, ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳನ್ನು ಒಳಗೊಂಡ ವಿಶೇಷ ಹೂಡಿಕೆ ವಲಯ ಸ್ಥಾಪಿಸಲಾಗಿದೆ. ಈ ಮೂಲಕವು ಹೂಡಿಕೆಗೆ ಉತ್ತೇಜನ ನೀಡಲಾಗುತ್ತಿದೆ ಎಂದವರು ತಿಳಿಸಿದರು.

ಎರಡನೇ ಹಾಗೂ ಮೂರನೇ ಹಂತದ ನಗರಗಳಲ್ಲಿ ಹೆಚ್ಚಿನ ಸೌಲಭ್ಯ ಕಲ್ಪಿಸುವ ಮೂಲಕ ಕೈಗಾರಿಕೆಗಳನ್ನು ಸೆಳೆಯಲು ರಾಜ್ಯಾದ್ಯಂತ ನಾನು ಪ್ರವಾಸ ಕೈಗೊಳ್ಳುತ್ತಿದ್ದೇನೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

**ರೈತರ ಶೋಷಣೆ :** ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ಕುಮ್ಮಕ್ಕಿನಿಂದಾಗಿ ದೆಹಲಿಯಲ್ಲಿ ಹೋರಾಟಗಳು ನಡೆಯುತ್ತಿದ್ದು, ಇದರಿಂದ ಮುಗ್ಧ ರೈತರ ಶೋಷಣೆಯಾಗುತ್ತಿದೆ ಎಂದು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಆರೋಪಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರಿಗೆ ದೆಹಲಿಯಲ್ಲಿ ನಿನ್ನೆ ನಡೆದ ಹಿಂಸಾಚಾರದ ಬಗ್ಗೆ ಪ್ರಶ್ನಿಸಿದಾಗ ಈ ಪ್ರತಿಕ್ರಿಯೆ ನೀಡಿದ್ದಾರೆ. ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳಿಗೆ ಮೋದಿ ಆಡಳಿತದ ವಿರುದ್ಧ ಮಾತನಾಡಲು ವಿಷಯಗಳಿಲ್ಲ. ಹೀಗಾಗಿ ಏನಾದರೂ ಟೀಕೆ ಮಾಡುವ ಸಲುವಾಗಿ ಕೃಷಿ ಕಾಯ್ದೆಗಳನ್ನು ಟೀಕಿಸುವ ಕೆಲಸ ಮಾಡುತ್ತಿವೆ ಎಂದರು.

# ಡಿ.ಸಿ. ಆಫೀಸ್ ಜಾಗ ವಾಪಸ್ ಕೊಡಿ!

## ಸಚಿವ ಜಗದೀಶ್ ಶೆಟ್ಟರ್ ಬಳಿ ಜಮೀನು ಕಳೆದುಕೊಂಡವರ ಮೊರೆ

ದಾವಣಗೆರೆ, ಜ. 27 - ಸಮಸ್ಯೆ ಬಗೆಹರಿಸಿ ಕೊಡಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಮಾಡಿಕೊಳ್ಳುವುದು ಮಾಮೂಲಿ. ಆದರೆ, ಜಿಲ್ಲಾಧಿಕಾರಿ ಕಚೇರಿಯನ್ನೇ ಬಿಟ್ಟು ಕೊಡಿ ಎಂಬ ಮನವಿಯೊಂದನ್ನು ಜಿಲ್ಲಾಧಿಕಾರಿ ಕಚೇರಿಯಲ್ಲೇ ದಾಖಲಿಸಲಾಗಿದೆ.

ರೈತರಿಂದ ವಶಪಡಿಸಿಕೊಂಡ ಭೂಮಿ ಉದ್ದೇಶಿತ ಯೋಜನೆಗೆ ಜಮೀನು ಬಳಕೆಯಾಗದ ಸಂದರ್ಭದಲ್ಲಿ ಅದನ್ನು ವಾಪಸ್ ಕೊಡಬೇಕೆಂಬ ನಿಯಮವಿದೆ. ಅದೇ ರೀತಿ ಜಿಲ್ಲಾಧಿಕಾರಿ ಕಚೇರಿ ಇರುವ ಜಾಗವನ್ನು ನಮಗೆ ವಾಪಸ್ ಕೊಡಿ ಎಂದು ಜಮೀನು ಕಳೆದುಕೊಂಡ ರೈತರು ಸಚಿವ ಜಗದೀಶ್ ಶೆಟ್ಟರ್‌ಗೆ ಮನವಿ ಮಾಡಿಕೊಂಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಈ ರೀತಿಯ ಮನವಿ ಸಲ್ಲಿಕೆಯಾಗಿದೆ.

ಸೈಯದ್ ನಯಾಜ್, ಸಯೀದಾ ಹಫೀಜಾ ಹಾಗೂ ಮರಡಿ ನಾಗಣ್ಣ ಅವರು ಸಭೆಗೆ ಬಂದು, ಕೈಗಾರಿಕೆಗಳಿಗಾಗಿ ಕೆಐಎಡಿಬಿಯಿಂದ ಜಮೀನು ವಶಪಡಿಸಿಕೊಳ್ಳಲಾಗಿತ್ತು. ಈಗ ಜಿಲ್ಲಾಧಿಕಾರಿ ಕಚೇರಿ ಕಟ್ಟುವ ಮೂಲಕ ಸರ್ಕಾರವೇ ರೂಪಿಸಿದ ನಿಯಮ ಉಲ್ಲಂಘಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಭಾವುಕರಾಗಿ ಮಾತನಾಡಿದ ಸೈಯಿದಾ, ಮನೆಯಲ್ಲಿ ತಂದೆ - ತಾಯಿಗಳು ಹಾಸಿಗೆ ಹಿಡಿದಿದ್ದಾರೆ. ಕೊರೊನಾ ಸಮಯದಲ್ಲಿ ಊಟಕ್ಕೂ ತೊಂದರೆಯಾಗಿದೆ. ನಮ್ಮ ಸಮಸ್ಯೆ ಬಗೆಹರಿಸಿ ಎಂದು ಮೊರೆಯಿಟ್ಟರು.

ಪದೇ ಪದೇ ಮಾಡಿದ ಒತ್ತಾಯಕ್ಕೆ ಒಂದು ಹಂತದಲ್ಲಿ ಏರಿದ ದನಿಯಲ್ಲಿ ಮಾತನಾಡಿದ ಸಚಿವ ಶೆಟ್ಟರ್, ಹರಿಹರದಲ್ಲಿ 20 ವರ್ಷಗಳಿಂದ ಬಾಕಿ ಇದ್ದ ಕ್ರಯಪತ್ರ ಸಮಸ್ಯೆ ಬಗೆಹರಿಸಿದ್ದೇನೆ. ಈ ಸಮಸ್ಯೆಯನ್ನೂ ಬಗೆಹರಿಸುವ ಬಯಕೆ ಇದೆ. ಪದೇ ಪದೇ ಸಮಸ್ಯೆ ಬಾಕಿ ಇದೆ ಎಂದು ಹೇಳುತ್ತಾ ಹೋದರೆ ಆಗುವುದಿಲ್ಲ. ನನ್ನ ಭರವಸೆ ಮೇಲೆ ನಂಬಿಕೆ ಇಡಿ ಎಂದು ತಿಳಿಸಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸೈಯದ್ ನಯಾಜ್, ತಮ್ಮ ತಂದೆ ಹಾಗೂ ಅವರ ಸಹೋದರಗೆ ಸೇರಿದ 12 ಎಕರೆ ಜಮೀನನ್ನು ಕೆಐಎಡಿಬಿ ಜವಳಿ ಪಾರ್ಕ್‌ಗೆ ಎಂದು ವಶಪಡಿಸಿಕೊಂಡಿತ್ತು. ನಂತರ ಉದ್ದೇಶ ಬದಲಿಸಲಾಗಿದೆ ಎಂದು ಹೇಳಿದರು.

# ದೇಶದ ಐಕ್ಯತೆ-ಸಮಗ್ರತೆಗೆ ಒಟ್ಟಾಗಿ ಶ್ರಮಿಸೋಣ

### ಹೊನ್ನಾಳಿ ಉಪ ತಹಶೀಲ್ದಾರ್ ಬಿ.ಎಂ. ರಮೇಶ್



ಹೊನ್ನಾಳಿ, ಜ.27- ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಎಲ್ಲರೂ ಒಟ್ಟಾಗಿ ಅವಿರತವಾಗಿ ಶ್ರಮಿಸಬೇಕು ಎಂದು ಉಪ ತಹಸೀಲ್ದಾರ್ ಬಿ.ಎಂ. ರಮೇಶ್ ಹೇಳಿದರು.

ತಾಲ್ಲೂಕಿನ ಕುಂದೂರು ಗ್ರಾಮದ ನಾಡ ಕಚೇರಿ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡ 72ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮಹಾತ್ಮಾ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯೋತ್ತರ ಭಾರತ ದೇಶ ಹಲವಾರು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದೆ. ಇದು ನಮ್ಮ ಹೆಮ್ಮೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ನಾವೆಲ್ಲರೂ ವೈಯಕ್ತಿಕ ಕಾಣಿಕೆ ನೀಡೋಣ ಎಂದು ತಿಳಿಸಿದರು.

ದೇಶದ ಏಕತೆ ಮತ್ತು ಅಖಂಡತೆಗೆ ನಮ್ಮ ಹಲವಾರು ನಾಯಕರು ದುಡಿದಿದ್ದಾರೆ. ಸ್ವಾತಂತ್ರ್ಯಾನಂತರ ಅಂದಿನ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೃಢಸಂಕಲ್ಪದಿಂದ ಹೈದರಾಬಾದ್‌ನ ನಿಜಾಮರ ಸಂಸ್ಥಾನಕ್ಕೆ ಸೇನೆ ಕರೆದೊಯ್ದು ಭಾರತ ದೇಶದ ಒಕ್ಕೂಟ ವ್ಯವಸ್ಥೆಗೆ ಹೈದರಾಬಾದ್ ಸಂಸ್ಥಾನ ಸೇರ್ಪಡೆಗೊಳ್ಳುವಂತೆ ಮಾಡಿದರು. ಅವರ ಹೋರಾಟ ಮನೋಭಾವ ನಮಗೆ ಮಾರ್ಗದರ್ಶಿಯಾಗಿದೆ ಎಂದು ವಿವರಿಸಿದರು.

ಕೊರೊನಾ ವೈರಸ್ ಸೋಂಕಿನಿಂದ ಇಡೀ ಜಗತ್ತೇ ತತ್ತರಿಸಿದ್ದು, ಭಾರತ ದೇಶದಲ್ಲೂ ಸಾಕಷ್ಟು ಸಾವು-ನೋವು ಸಂಭವಿಸಿ ಅಪಾರ ಹಾನಿಯುಂಟಾಗಿದೆ. ದೇಶದ ಆರ್ಥಿಕತೆ ಪುನರುಜ್ಜೀವನಗೊಳಿಸುವುದರ ಜೊತೆಗೆ ದೇಶವನ್ನು ಬಲಿಷ್ಠಗೊಳಿಸುವ ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದರು

ಕುಂದೂರು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎಂ.ಸಿ. ಅನ್ನಪೂರ್ಣ, ಕುಂದೂರು ವೃತ್ತದ ಗ್ರಾಮ ಲೆಕ್ಕಿಗ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಾಮೂಹಿಕ ಗಾಯತ್ರಿ ಪೂಜೆ ಹಾಗೂ ಉಪಾಸನೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಬನದ ಹುಣ್ಣಿಮೆ ಅಂಗವಾಗಿ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ॥ ಸುಶೀಲಮ್ಮ ತಿಳಿಸಿದ್ದಾರೆ. ವಿ. ವೀರಭದ್ರಪ್ಪ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ಕೊರೊನಾ ಹೊಸ ಮಾರ್ಗಸೂಚಿ

**(1ನೇ ಪುಟದಿಂದ)** ಕಲ್ಪಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕ ಮಾರ್ಗಸೂಚಿ ಪ್ರಕಟಿಸಲಾಗುವುದು. ಔದ್ಯಮಿಕ ಪ್ರದರ್ಶನಗಳಿಗೆ ಇದುವರೆಗೂ ಅವಕಾಶ ಇತ್ತು. ಇನ್ನು ಮುಂದೆ ಎಲ್ಲ ರೀತಿಯ ಪ್ರದರ್ಶನ ಹಾಲ್‌ಗಳಿಗೆ ಅವಕಾಶ ಮಾಡಿಕೊಡಲಾಗುವುದು.

## ರೈತ ಸಂಘಟನೆಗಳಲ್ಲಿ ಒಡಕು

**(1ನೇ ಪುಟದಿಂದ)** ಭಾರತೀಯ ಕಿಸಾನ್ ಯೂನಿಯನ್ (ಭಾನು) ಹಾಗೂ ಆಲ್ ಇಂಡಿಯಾ ಕಿಸಾನ್ ಸಂಘರ್ಷ ಕೋಆರ್ಡಿನೇಷನ್ ಕಮಿಟಿಗಳು ದೆಹಲಿ ಗಡಿಯಲ್ಲಿ ನಡೆಸಲಾಗುತ್ತಿರುವ ಪ್ರತಿಭಟನೆಯಿಂದ ಹಿಂದೆ ಸರಿದಿವೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಭಾರತೀಯ ಕಿಸಾನ್ ಯೂನಿಯನ್ (ಭಾನು) ಅಧ್ಯಕ್ಷ ಠಾಕೂರ್ ಭಾನು ಪ್ರತಾಪ್ ಸಿಂಗ್, ಟ್ರ್ಯಾಕ್ಟರ್ ಪರೇಡ್ ವೇಳೆ ರಾಜಧಾನಿಯಲ್ಲಿ ನಡೆದ ಘಟನೆಗಳಿಂದ ನೋವಾಗಿದೆ. ತಮ್ಮ ಸಂಘಟನೆ ಪ್ರತಿಭಟನೆಯಿಂದ ಹಿಂದೆ ಸರಿಯಲಿದೆ ಎಂದಿದ್ದಾರೆ. ಈ ಸಂಘಟನೆಯು ದೆಹಲಿಯ ಚಿಲ್ಲಾ ಬಾರ್ಡರ್‌ನಲ್ಲಿ ಪ್ರತಿಭಟನೆ ನಡೆಸುತ್ತಿತ್ತು.

ಆಲ್ ಇಂಡಿಯಾ ಕಿಸಾನ್ ಸಂಘರ್ಷ ಕೋಆರ್ಡಿನೇಷನ್ ಕಮಿಟಿಯ ವಿ.ಎಂ.ಸಿಂಗ್ ಹೇಳಿಕೆ ನೀಡಿದ್ದು, ಹೋರಾಟ ಬೇರೆ ದಿಕ್ಕಿಗೆ ನಡೆಯುತ್ತಿರುವಾಗ ನಾವು ಪ್ರತಿಭಟನೆಯಲ್ಲಿ ಮುಂದುವರೆಯಲು ಸಾಧ್ಯವಾಗದು ಎಂದಿದ್ದಾರೆ.

ಕೇಂದ್ರ ಸರ್ಕಾರದ ಬಜೆಟ್ ಮಂಡನೆಯಾಗುವ ಫೆಬ್ರವರಿ 1ರಂದು ಸಂಸತ್ತಿನ ಕಡೆ ನಡೆಯುವುದಾಗಿ ರೈತ ಸಂಘಟನೆಗಳು ಈ ಹಿಂದೆ ತಿಳಿಸಿದ್ದವು. ಆದರೆ, ಈ ಪ್ರತಿಭಟನೆಯ ಬಗ್ಗೆ ಮರು ಪರಿಶೀಲಿಸಲಾಗುತ್ತಿದೆ. 41 ರೈತ ಒಕ್ಕೂಟಗಳ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾ, ಫೆಬ್ರವರಿ 1ರ ಪ್ರತಿಭಟನೆಯನ್ನು ಮುಂದೂಡುವ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಗಣರಾಜ್ಯೋತ್ಸವ ದಿನದ ಘಟನೆಯ ಬಗ್ಗೆ ಹೇಳಿಕೆ ನೀಡಿರುವ ಸಂಯುಕ್ತ ಕಿಸಾನ್ ಮೋರ್ಚಾ, ರೈತರ ಹೋರಾಟದಿಂದ ಕೇಂದ್ರ ಸರ್ಕಾರ ನಡುಗಿ ಹೋಗಿದೆ. ಹೀಗಾಗಿ ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿ ಮತ್ತಿತರರ ಜೊತೆಗೂಡಿ ಸಂಚು ನಡೆಸಿದೆ ಎಂದು ಆರೋಪಿಸಿದೆ.

ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿಯು ರೈತರ ಹೋರಾಟ ಆರಂಭವಾದ 15 ದಿನಗಳ ನಂತರದಿಂದ ಪ್ರತ್ಯೇಕ ಸ್ಥಳದಲ್ಲಿ ಪ್ರತಿಭಟನೆ ನಡೆಸುತ್ತಿದೆ. ಅವರು ಜಂಟಿಯಾಗಿ ನಡೆಸುತ್ತಿರುವ ಹೋರಾಟದ ಭಾಗವಾಗಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಸಂಸ್ಕೃತಿ ಸಚಿವ ಪ್ರಹ್ಲಾದ್ ಪಟೇಲ್ ಅವರು ಪ್ರತಿಭಟನಾ ನಿರತ ರೈತರಿಂದ ಹಾನಿಗೀಡಾದ ಕೆಂಪು ಕೋಟೆ ಸ್ಮಾರಕ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ. ಕೆಂಪು ಕೋಟೆಯ ಮೇಲೆ ಸಿಖ್ ಧಾರ್ಮಿಕ ಧ್ವಜವಾದ ನಿಶಾನ್ ಸಾಹಿಬ್ ಹಾರಿಸಲಾಗಿತ್ತು.

# ಫೆ.14ಕ್ಕೆ ಹರಪನಹಳ್ಳಿ ತಾಲ್ಲೂಕು ವೀರಶೈವ ಮಹಾಸಭಾದ ಚುನಾವಣೆ

ಹರಪನಹಳ್ಳಿ, ಜ.26 - ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಪದಾಧಿಕಾರಿಗಳ ಚುನಾವಣೆ ಬರುವ ಫೆಬ್ರವರಿ 14ರಂದು ನಡೆಯಲಿದೆ ಎಂದು ಸಹಾಯಕ ಚುನಾವಣಾಧಿಕಾರಿ ಸಿ.ಎಂ. ಕೊಟ್ರಯ್ಯ ತಿಳಿಸಿದರು.

ಪಟ್ಟಣದ ಕೆ.ಸಿ.ಎ. ಆಂಗ್ಲ ಮಾಧ್ಯಮ ಪ್ರೌಢ ಶಾಲಾವರಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ನಾಳೆ ದಿನಾಂಕ 28ರಿಂದ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಲಿದ್ದು ಕೊನೆಯ ದಿನ ಫೆ.2ಕ್ಕೆ ಮುಕ್ತಾಯಗೊಳ್ಳುತ್ತದೆ. ಫೆ.3ರಂದು ನಾಮಪತ್ರಗಳ ಪರಿಶೀಲನೆ. ಫೆ.6ರ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಹಿಂಪಡೆಯಬಹುದು. ಫೆ.14ರಂದು ಮತದಾನ ಪ್ರಕ್ರಿಯೆ ನಡೆಯಲಿದೆ ಎಂದರು.

ತಾಲ್ಲೂಕಿನಲ್ಲಿ 351 ಜನ ಸದಸ್ಯರು ಮತ ಚಲಾಯಿಸಲು ಅರ್ಹರಿದ್ದಾರೆ. ಒಂದು ಅಧ್ಯಕ್ಷ ಸ್ಥಾನ, 7 ಮಹಿಳಾ ಮೀಸಲು ಸ್ಥಾನ, 13 ಸಾಮಾನ್ಯ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಕೆ.ಸಿ.ಎ.ಆಂಗ್ಲ ಮಾಧ್ಯಮ ಶಾಲಾವರಣದಲ್ಲಿಯೇ ಚುನಾವಣೆ ಪ್ರಕ್ರಿಯೆ ಜರುಗಲಿದೆ.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎಂ.ರಾಜಶೇಖರ್ ಮಾತನಾಡಿದರು. ಮುಖಂಡರಾದ ಪಿ.ಬೆಟ್ಟನಗೌಡ, ಎಂ.ಟಿ.ಬಸವನಗೌಡ, ಸದ್ಯೋಜಾತಯ್ಯ, ಟಿ.ಎಂ.ಚಂದ್ರಶೇಖರಯ್ಯ, ಟಿ.ಎಚ್.ಎಂ. ಮಲ್ಲಿಕಾರ್ಜುನಯ್ಯ, ಅಂಬ್ಲಿ ಮಂಜುನಾಥ, ಮತ್ತಿಹಳ್ಳಿ ಅಜ್ಜಣ್ಣ, ಪ್ರಭಾ ಅಜ್ಜಣ್ಣ, ಹಾರಕನಾಳ ಪ್ರಕಾಶಗೌಡ, ಎಸ್.ಎಂ.ವೀರಭದ್ರಯ್ಯ, ಎಚ್.ಮಲ್ಲಿಕಾರ್ಜುನ, ಮಟ್ಟಿ ಮುತ್ತಣ್ಣ, ಪದ್ಮಾವತಿ, ಚಂದ್ರಶೇಖರ ಪತ್ರಿಕಾಗೋಷ್ಠಿಯಲ್ಲಿದ್ದರು.

## ಶಶಿಕಲಾ ಬಿಡುಗಡೆ

**(1ನೇ ಪುಟದಿಂದ)** ಕೆಲ ದಿನ ವಿಕ್ಟೋರಿಯಾ ಆಸ್ಪತ್ರೆಯಲ್ಲೇ ಉಳಿದುಕೊಳ್ಳಲಿದ್ದಾರೆ. ಅವರು ಲಕ್ಷಣ ರಹಿತ ಕೊರೊನಾಗೆ ಗುರಿಯಾಗಿದ್ದಾರೆ. ಜನವರಿ 30ರವರೆಗೂ ಲಕ್ಷಣ ಗಳೂ ಕಾಣದೇ ಹೋದರೆ ಹಾಗೂ ಮೂರು ದಿನಗಳ ಕಾಲ ಆಕ್ಸಿಜನ್ ಅಗತ್ಯ ಬಾರದೇ ಹೋದರೆ ಬಿಡುಗಡೆ ಮಾಡಲಾಗುವುದು ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶಶಿಕಲಾ ಬೆಂಬಲಿಗರು ವಿಕ್ಟೋರಿಯಾ ಆಸ್ಪತ್ರೆಯ ಹೊರಗೆ ಸಾಲುಗಟ್ಟಿ ಅವರ ಪರವಾಗಿ ಘೋಷಣೆ ಕೂಗಿದರು ಹಾಗೂ ಸಿಹಿ ವಿತರಿಸಿದರು.


### ಕೆಪಿಟಿಸಿಎಲ್ ನಿವೃತ್ತ ಜೆಇ ಕೆ.ಎಸ್. ಬಸವರಾಜು ನಿಧನ



ದಾವಣಗೆರೆ ಆಂಜನೇಯ ಬಡಾವಣೆ, 11ನೇ ಕ್ರಾಸ್ ವಾಸಿ, ಕೆಪಿಟಿಸಿಎಲ್ ನಿವೃತ್ತ ಜೆಇ **ಕೆ.ಎಸ್. ಬಸವರಾಜು** (68) ಅವರು ದಿನಾಂಕ 27.01.2021ರ ಬುಧವಾರ ರಾತ್ರಿ 7 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.01.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ. : 98440 11135, 94483 39448**

### ನಾಲ್ಕನೇ ವರ್ಷದ ಪುಣ್ಯ ಸ್ಮರಣೆ



**ದಿ॥ ಎಸ್.ಸಿ. ಮಂಜುಳಾ**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ನಿಮ್ಮ ಸವಿನೆನಪು ನಮ್ಮಲ್ಲಿ ಸದಾ ಹಸಿರಾಗಿದೆ ಹಾಗೂ ತಾವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

**ಪತಿ :** ಶ್ರೀ ಎಸ್. ಚಂದ್ರಶೇಖರಪ್ಪ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ದಾವಣಗೆರೆ.
**ಮಕ್ಕಳಾದ :** ಡಾ॥ ಎಸ್.ಸಿ. ಚಿದಾನಂದ ಮತ್ತು ಶ್ರೀಮತಿ ಸ್ಮಿತಾ ಎಸ್.ಸಿ., ಬೆಂಗಳೂರು.,
ಶ್ರೀಮತಿ ಸಹನಾ ಕೋಂ. ರಾಜೀವ್, ಆಲ್ದೂರು. ಚಿಕ್ಕಮಗಳೂರು ಜಿಲ್ಲೆ,
ಶ್ರೀ ಎಸ್.ಸಿ. ನಾಗರಾಜ್ ಮತ್ತು ಶ್ರೀಮತಿ ಎಸ್.ಎನ್. ಗಂಗಾ,
(ಮೆ॥ ಆಗ್ರೋ ಸೀಡ್ಸ್ ಕಾರ್ಪೊರೇಷನ್, ದಾವಣಗೆರೆ.)
ಹಾಗೂ ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು.

### ಮಳ್ಳೇಕಟ್ಟೆ ಬೇತೂರು ಎಂ.ಬಿ. ಗುರುಶಾಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಮಳ್ಳೇಕಟ್ಟೆ ಗ್ರಾಮದ ವಾಸಿ ಬೇತೂರು ಬಸಪ್ಪನವರ ಮಗ ಎಂ.ಬಿ. ಗುರುಶಾಂತಪ್ಪ (69) ಅವರು ದಿನಾಂಕ 27-01-2021 ರ ಬುಧವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28-01-2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಮಳ್ಳೇಕಟ್ಟೆ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಲಿದೆ.


# ರಾಜೀನಾಮೆಗೆ ಮುಂದಾದ ಸಚಿವ ಆನಂದ್ ಸಿಂಗ್

**(1ನೇ ಪುಟದಿಂದ)** ಮಾಡಿ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದರು. ಆದರೆ ಕಾವೇರಿ ನಿವಾಸದ ಭದ್ರತಾ ಪಡೆ 'ಸಾಹೇಬರು ವಿಶ್ರಾಂತಿಯಲ್ಲಿದ್ದಾರೆ' ಎಂದು ಅವರನ್ನು ಭೇಟಿ ಮಾಡಲು ಅವಕಾಶ ನೀಡಲಿಲ್ಲ. ಇಂದು ಬೆಳಿಗ್ಗೆ ಕೂಡಾ ಮುಖ್ಯಮಂತ್ರಿಯವರನ್ನು ಭೇಟಿ ಮಾಡಲು ಎರಡು, ಮೂರು ಬಾರಿ ಪ್ರಯತ್ನಿಸಿದರು. ಮುಖ್ಯಮಂತ್ರಿಯವರ ಭೇಟಿ ಸಾಧ್ಯವಾಗದಿದ್ದರೆ, ರಾಜಭವನಕ್ಕೆ ನೇರವಾಗಿ ತೆರಳಿ ತಮ್ಮ ರಾಜೀನಾಮೆಯನ್ನು ರಾಜ್ಯಪಾಲರಿಗೆ ಸಲ್ಲಿಸಲು ನಿರ್ಧರಿಸಿದ್ದಾರೆ.

ನೂತನ ಸಚಿವರಿಗೆ ಖಾತೆ ಹಂಚಿಕೆ ಸಂದರ್ಭದಲ್ಲಿ ಆನಂದ್‌ಸಿಂಗ್ ಅವರ ಬಳಿ ಇದ್ದ ಅರಣ್ಯ ಖಾತೆ ಹಿಂದಕ್ಕೆ ಪಡೆದು, ಪ್ರವಾಸೋದ್ಯಮ ಮತ್ತು ಮೂಲ ಸೌಕರ್ಯ ಖಾತೆಯನ್ನು ನೀಡಿದ್ದರು.

ಡಾ. ಸುಧಾಕರ್ ಹಾಗೂ ಮಾಧುಸ್ವಾಮಿ ಅವರು ಖಾತೆ ಹಂಚಿಕೆಗೆ ಸಂಬಂಧಿಸಿದಂತೆ ಬಂಡಾಯದ ಬಾವುಟ ಹಾರಿಸಿದ ಬೆನ್ನಲ್ಲೇ ಅವರನ್ನು ಮನವೊಲಿಸಿಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿಯವರು ನಾಲ್ಕನೇ ಬಾರಿಗೆ ಖಾತೆ ಬದಲಾವಣೆ ಮಾಡಿದರು.

ಈ ಸಂದರ್ಭದಲ್ಲಿ ಆನಂದ್‌ಸಿಂಗ್ ಅವರಿಗೆ ಹೊಸದಾಗಿ ನೀಡಿದ್ದ ಪ್ರವಾಸೋದ್ಯಮವನ್ನು ಹಿಂದಕ್ಕೆ ಪಡೆದು, ಹಜ್ ಮತ್ತು ವಕ್ಫ್ ಖಾತೆಯನ್ನು ನೀಡಿದ್ದರು.

ಖಾತೆ ಬದಲಾವಣೆಯಿಂದ ಬೇಸತ್ತ ಆನಂದ್‌ಸಿಂಗ್, ಗಣರಾಜ್ಯೋತ್ಸವ ಬಾವುಟ ಹಾರಿಸಿದ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಮುಖ್ಯಮಂತ್ರಿ ಕಾರ್ಯಾಲಯಕ್ಕೆ ಮಾಹಿತಿ ನೀಡಿದ್ದರು.

ಸುಧಾಕರ್ ಹಾಗೂ ಮಾಧುಸ್ವಾಮಿ ಅವರ ಒತ್ತಡಗಳಿಗೆ ಮಣಿದು ಖಾತೆ ಬದಲಾವಣೆ ಮಾಡಿದರೂ, ಆನಂದ್‌ಸಿಂಗ್ ಅವರ ಮಾತಿಗೆ ಬೆಲೆ ನೀಡಲಿಲ್ಲ. ಇದರಿಂದ ಬೇಸತ್ತಿರುವ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಬಿಜೆಪಿ ಶಾಸಕರಾಗಿಯೇ ಮುಂದುವರೆಯಲು ತೀರ್ಮಾನಿಸಿದ್ದಾರೆ.

ಮುಖ್ಯಮಂತ್ರಿಯವರು ತಮ್ಮ ಬೇಡಿಕೆಯಂತೆ ಬಳ್ಳಾರಿ ಜಿಲ್ಲೆ ವಿಭಜಿಸಿ, ವಿಜಯನಗರ ಹೊಸ ಜಿಲ್ಲೆಯನ್ನಾಗಿ ಮಾಡಿದ್ದಾರೆ. ಅದಷ್ಟೇ ಸಾಕು. ಹಜ್ ಇಲಾಖೆ ನಿರ್ವಹಿಸಲು ನಾನು ಸಚಿವನಾಗಬೇಕಾಗಿಲ್ಲ. ಶಾಸಕನಾಗಿಯೇ ಇರುತ್ತೇನೆ ಎಂದು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಸುಧಾಕರ್, ಯೋಗೇಶ್ವರ್ ಹಾಗೂ ಜಾರಕಿಹೊಳಿ ಸಚಿವರ ವಿರುದ್ಧ ಹಠಾವೋ ಬಾವುಟ ಹಾರಿಸಿರುವ ಬಂಡಾಯ ಶಾಸಕರ ಗುಂಪನ್ನು ಸಂಪರ್ಕಿಸಿದ ಆನಂದ್‌ಸಿಂಗ್ ನಿಮ್ಮ ಜೊತೆ ನಾನು ಇರುತ್ತೇನೆ.

ನಾನು ರಾಜ್ಯಪಾಲರನ್ನು ಭೇಟಿ ಮಾಡಿ ರಾಜೀನಾಮೆ ನೀಡುತ್ತೇನೆ. ಈ ಸಂದರ್ಭದಲ್ಲಿ ನೀವು ನನ್ನ ಜೊತೆ ಎಲ್ಲರೂ ಬರಬೇಕೆಂದು ಮನವಿ ಮಾಡಿಕೊಂಡರು. ರಾಜಭವನಕ್ಕೆ ನಿಮ್ಮ ಜೊತೆ ಬಂದರೆ ನಾವು ಮುಖ್ಯಮಂತ್ರಿ ವಿರುದ್ಧ ಎಂಬ ಭಾವನೆ ಬರುತ್ತದೆ. ನೀವು ರಾಜೀನಾಮೆ ನೀಡಿ ಬನ್ನಿ, ನಾವು ನಿಮ್ಮ ಜೊತೆ ಇರುತ್ತೇವೆ ಎಂದು ಈ ಬಂಡಾಯ ಶಾಸಕರು, ಆನಂದ್‌ಸಿಂಗ್‌ಗೆ ಕಿವಿಮಾತು ಹೇಳಿ, ಪರೇಡ್ ನಡೆಸಲು ಹಿಂದೇಟು ಹಾಕಿದ್ದಾರೆ.

# ಗ್ರಾಮ ಪಂಚಾಯ್ತಿ ಅಧ್ಯಕ್ಷ-ಉಪಾಧ್ಯಕ್ಷರ ಮೀಸಲಾತಿ ಪಟ್ಟಿ ನಿಗದಿ

ದಾವಣಗೆರೆ, ಜ. 27- ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಬುಧವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯ್ತಿಯ ಮೊದಲನೇ 30 ತಿಂಗಳ ಅವಧಿಗೆ ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ತಂತ್ರಾಂಶದ ಮೂಲಕ ಕೆಳಕಂಡ ಪಟ್ಟಿಯನ್ವಯ ವರ್ಗವಾರು ಮೀಸಲಾತಿ ನಿಗದಿಪಡಿಸಲಾಗಿದೆ.

## ಹರಿಹರ ತಾಲ್ಲೂಕು

| ಸಂಖ್ಯೆ | ಗ್ರಾ.ಪಂ. ಹೆಸರು | ಅಧ್ಯಕ್ಷ | ಉಪಾಧ್ಯಕ್ಷ |
|---|---|---|---|
| 1 | ಸಾರಥಿ | ಸಾಮಾನ್ಯ(ಮಹಿಳೆ) | ಅನುಸೂಚಿತ ಪಂಗಡ |
| 2 | ಕೊಂಡಜ್ಜಿ | ಸಾಮಾನ್ಯ | ಸಾಮಾನ್ಯ(ಮಹಿಳೆ) |
| 3 | ಗುತ್ತೂರು | ಅನುಸೂಚಿತ ಜಾತಿ(ಮಹಿಳೆ) | ಸಾಮಾನ್ಯ |
| 4 | ಹನಗವಾಡಿ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 5 | ರಾಜನಹಳ್ಳಿ | ಅನುಸೂಚಿತ ಪಂಗಡ | ಸಾಮಾನ್ಯ(ಮಹಿಳೆ) |
| 6 | ನಂದಿಗಾವಿ | ಹಿಂದುಳಿದ 'ಅ' ವರ್ಗ | ಅನುಸೂಚಿತ ಪಂಗಡ(ಮಹಿಳೆ) |
| 7 | ಬೆಳ್ಳೂಡಿ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 8 | ಬನ್ನಿಕೋಡು | ಅನುಸೂಚಿತ ಪಂಗಡ(ಮಹಿಳೆ) | ಹಿಂದುಳಿದ ಅ ವರ್ಗ |
| 9 | ಸಾಲಕಟ್ಟೆ | ಸಾಮಾನ್ಯ | ಸಾಮಾನ್ಯ |
| 10 | ದೇವರಬೆಳೆಕೆರೆ | ಅನುಸೂಚಿತ ಜಾತಿ | ಸಾಮಾನ್ಯ(ಮಹಿಳೆ) |
| 11 | ಕುಣೆಬೆಳಕೆರೆ | ಹಿಂದುಳಿದ ಅ ವರ್ಗ(ಮಹಿಳೆ) | ಅನುಸೂಚಿತ ಜಾತಿ(ಮಹಿಳೆ) |
| 12 | ಭಾನುವಳ್ಳಿ | ಹಿಂದುಳಿದ ಬ ವರ್ಗ(ಮಹಿಳೆ) | ಸಾಮಾನ್ಯ |
| 13 | ಸಿರಿಗೆರೆ | ಅನುಸೂಚಿತ ಪಂಗಡ(ಮಹಿಳೆ) | ಹಿಂದುಳಿದ ಬ ವರ್ಗ(ಮಹಿಳೆ) |
| 14 | ಕಡರನಾಯ್ಕನಹಳ್ಳಿ | ಸಾಮಾನ್ಯ | ಹಿಂದುಳಿದ ಅ ವರ್ಗ(ಮಹಿಳೆ) |
| 15 | ಉಕ್ಕಡಗಾತ್ರಿ | ಅನುಸೂಚಿತ ಜಾತಿ | ಹಿಂದುಳಿದ ಅ ವರ್ಗ(ಮಹಿಳೆ) |
| 16 | ಯಲವಟ್ಟಿ | ಸಾಮಾನ್ಯ | ಅನುಸೂಚಿತ ಜಾತಿ |
| 17 | ಕುಂಬಳೂರು | ಸಾಮಾನ್ಯ(ಮಹಿಳೆ) | ಅನುಸೂಚಿತ ಜಾತಿ |
| 18 | ಜಿಗಳಿ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 19 | ಕೊಕ್ಕನೂರು | ಸಾಮಾನ್ಯ | ಅನುಸೂಚಿತ ಜಾತಿ(ಮಹಿಳೆ) |
| 20 | ವಾಸನ | ಅನುಸೂಚಿತ ಜಾತಿ(ಮಹಿಳೆ) | ಸಾಮಾನ್ಯ |
| 21 | ಹರಳಹಳ್ಳಿ | ಹಿಂದುಳಿದ ಅ ವರ್ಗ(ಮಹಿಳೆ) | ಸಾಮಾನ್ಯ(ಮಹಿಳೆ) |
| 22 | ಹಾಲಿವಾಣ | ಹಿಂದುಳಿದ 'ಅ ವರ್ಗ | ಅನುಸೂಚಿತ ಪಂಗಡ(ಮಹಿಳೆ) |
| 23 | ಎಳೆಹೊಳೆ | ಸಾಮಾನ್ಯ | ಸಾಮಾನ್ಯ(ಮಹಿಳೆ) |
| 24 | ಕೆ.ಬೇವಿನಹಳ್ಳಿ | ಸಾಮಾನ್ಯ | ಹಿಂದುಳಿದ ಅ ವರ್ಗ |

## ಹೊನ್ನಾಳಿ ತಾಲ್ಲೂಕು

| ಸಂಖ್ಯೆ | ಗ್ರಾ.ಪಂ. ಹೆಸರು | ಅಧ್ಯಕ್ಷ | ಉಪಾಧ್ಯಕ್ಷ |
|---|---|---|---|
| 1 | ಕತ್ತಿಗೆ | ಸಾಮಾನ್ಯ | ಅನುಸೂಚಿ ಪಂಗಡ(ಮಹಿಳೆ) |
| 2 | ಹತ್ತೂರು | ಸಾಮಾನ್ಯ | ಅನುಸೂಚಿ ಪಂಗಡ |
| 3 | ಹೆಚ್ ಗೋಪಗೊಂಡನಹಳ್ಳಿ | ಹಿಂದುಳಿದ 'ಅ' ವರ್ಗ | ಸಾಮಾನ್ಯ |
| 04 | ಹನುಮಸಾಗರ | ಅನುಸೂಚಿ ಪಂಗಡ | ಸಾಮಾನ್ಯ(ಮಹಿಳೆ) |
| 05 | ಸೊರಟೂರು | ಹಿಂದುಳಿದ 'ಅ' ವರ್ಗ (ಮಹಿಳೆ) | ಹಿಂದುಳಿದ 'ಬ' ವರ್ಗ(ಮಹಿಳೆ) |
| 06 | ಹೆಚ್ ಕಡದಕಟ್ಟೆ | ಅನುಸೂಚಿತ ಜಾತಿ | ಸಾಮಾನ್ಯ(ಮಹಿಳೆ) |
| 07 | ಅರಬಗಟ್ಟೆ | ಸಾಮಾನ್ಯ(ಮಹಿಳೆ) | ಹಿಂದುಳಿದ 'ಅ' ವರ್ಗ (ಮಹಿಳೆ) |
| 08 | ಹರಳಹಳ್ಳಿ | ಸಾಮಾನ್ಯ(ಮಹಿಳೆ) | ಅನುಸೂಚಿತ ಜಾತಿ |
| 09 | ಹಿರೇಗೋಣಿಗೆರೆ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 10 | ಬೇಲಿಮಲ್ಲೂರು | ಹಿಂದುಳಿದ 'ಅ' ವರ್ಗ (ಮಹಿಳೆ) | ಅನುಸೂಚಿತ ಜಾತಿ |
| 11 | ಅರಕೆರೆ | ಸಾಮಾನ್ಯ | ಹಿಂದುಳಿದ 'ಅ' ವರ್ಗ (ಮಹಿಳೆ) |
| 12 | ಮಾಸಡಿ | ಸಾಮಾನ್ಯ | ಹಿಂದುಳಿದ 'ಅ' ವರ್ಗ (ಮಹಿಳೆ) |
| 13 | ಕಮ್ಮಾರಗಟ್ಟೆ | ಸಾಮಾನ್ಯ | ಸಾಮಾನ್ಯ(ಮಹಿಳೆ) |
| 14 | ತಿಮ್ಲಾಪುರ | ಸಾಮಾನ್ಯ(ಮಹಿಳೆ) | ಅನುಸೂಚಿ ಜಾತಿ(ಮಹಿಳೆ) |
| 15 | ಕುಂಬಳೂರು | ಸಾಮಾನ್ಯ | ಅನುಸೂಚಿತ ಜಾತಿ(ಮಹಿಳೆ) |
| 16 | ಕುಂದೂರು | ಹಿಂದುಳಿದ 'ಅ' ವರ್ಗ | ಸಾಮಾನ್ಯ(ಮಹಿಳೆ) |
| 17 | ಯಕ್ಕನಹಳ್ಳಿ | ಸಾಮಾನ್ಯ | ಸಾಮಾನ್ಯ(ಮಹಿಳೆ) |
| 18 | ಕೂಲಂಬಿ | ಅನುಸೂಚಿತ ಜಾತಿ(ಮಹಿಳೆ) | ಸಾಮಾನ್ಯ |
| 19 | ಮುಕ್ತೇನಹಳ್ಳಿ | ಹಿಂದುಳಿದ 'ಅ' ವರ್ಗ (ಮಹಿಳೆ) | ಸಾಮಾನ್ಯ |
| 20 | ಬನ್ನಿಕೋಡು | ಸಾಮಾನ್ಯ(ಮಹಿಳೆ) | ಹಿಂದುಳಿದ 'ಅ' ವರ್ಗ |
| 21 | ಬೆನಕನಹಳ್ಳಿ | ಅನುಸೂಚಿತ ಪಂಗಡ(ಮಹಿಳೆ) | ಸಾಮಾನ್ಯ |
| 22 | ಬೀರಗೊಂಡನಹಳ್ಳಿ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 23 | ರಾಂಪುರ | ಸಾಮಾನ್ಯ(ಮಹಿಳೆ) | ಸಾಮಾನ್ಯ |
| 24 | ಸಾಸ್ವೇಹಳ್ಳಿ | ಹಿಂದುಳಿದ 'ಬ' ವರ್ಗ (ಮಹಿಳೆ) | ಅನುಸೂಚಿತ ಜಾತಿ(ಮಹಿಳೆ) |
| 25 | ಕುಳಗಟ್ಟೆ | ಹಿಂದುಳಿದ 'ಅ' ವರ್ಗ | ಸಾಮಾನ್ಯ(ಮಹಿಳೆ) |
| 26 | ಕ್ಯಾಸನಕೆರೆ | ಸಾಮಾನ್ಯ | ಸಾಮಾನ್ಯ((ಮಹಿಳೆ) |
| 27 | ಹೊಸಹಳ್ಳಿ | ಅನುಸೂಚಿತ ಜಾತಿ(ಮಹಿಳೆ) | ಹಿಂದುಳಿದ 'ಅ' ವರ್ಗ |
| 28 | ಲಿಂಗಾಪುರ | ಅನುಸೂಚಿತ ಜಾತಿ | ಸಾಮಾನ್ಯ |
| 29 | ಹುಣಸಘಟ್ಟೆ | ಅನುಸೂಚಿತ ಜಾತಿ(ಮಹಿಳೆ) | ಹಿಂದುಳಿದ 'ಅ' ವರ್ಗ |

# ಹೊರಟ್ಟಿಗೆ ಪರಿಷತ್ ಅಧ್ಯಕ್ಷ ಸ್ಥಾನ



**ಬಿಜೆಪಿಯ ಪ್ರಾಣೇಶ್ ಗೆ ಉಪಸಭಾಧ್ಯಕ್ಷ ಸ್ಥಾನ ಪಡೆಯಲು ಸಹಮತ**

ಬೆಂಗಳೂರು, ಜ. 27 – ಪರಿಷತ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಹಂಚಿಕೊಳ್ಳಲು ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷವಾದ ಜೆಡಿಎಸ್ ಸಮ್ಮತಿಸಿವೆ.

ಹಲವು ಸುತ್ತಿನ ಮಾತುಕತೆಯ ನಂತರ ಮೂಡಿ ಬಂದಿರುವ ಒಮ್ಮತದ ಪ್ರಕಾರ, ಜೆಡಿಎಸ್ ಸಭಾಧ್ಯಕ್ಷ ಸ್ಥಾನ ಹಾಗೂ ಬಿಜೆಪಿ ಉಪಾಧ್ಯಕ್ಷ ಸ್ಥಾನ ಪಡೆಯಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜೆಡಿಎಸ್ ಪರಿಷತ್ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಅವರು ಸಭಾಧ್ಯಕ್ಷ ಸ್ಥಾನ ಪಡೆಯಲಿದ್ದಾರೆ. ಬಿಜೆಪಿಯ ಎಂ.ಕೆ ಪ್ರಾಣೇಶ್ ಉಪಸಭಾಧ್ಯಕ್ಷರ ಸ್ಥಾನ ಪಡೆಯಲಿದ್ದಾರೆ.

ಜನವರಿ 29ರಂದು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಗುರುವಾರ ಪ್ರಾಣೇಶ್ ನಾಮಪತ್ರ ಸಲ್ಲಿಸಲಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಕ್ಷದ ಶಾಸಕರು ಸಚಿವರ ಜೊತೆ ಸಭೆ ನಡೆಸಿದ ನಂತರ ಪ್ರಾಣೇಶ್ ಹೆಸರನ್ನು ಅಂತಿಮಗೊಳಿಸಲಾಗಿದೆ. ಇದಕ್ಕೂ ಮುಂಚೆ ಹೊರಟ್ಟಿ ಅವರು ಯಡಿಯೂರಪ್ಪ ಭೇಟಿ ಮಾಡಿ ಬಿಜೆಪಿಯ ಬೆಂಬಲ ಕೋರಿದ್ದರು.

ಜೆಡಿ (ಎಸ್) ವರಿಷ್ಠ ಹೆಚ್.ಡಿ. ದೇವೇಗೌಡ ಈಗಾಗಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡ ಜೊತೆ ಮಾತನಾಡಿ ಬಿಜೆಪಿ ಬೆಂಬಲ ಕೇಳಿದ್ದಾರೆ ಎಂದು ಹೊರಟ್ಟಿ ತಿಳಿಸಿದ್ದಾರೆ.

ಯಡಿಯೂರಪ್ಪ ಭೇಟಿ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಹೊರಟ್ಟಿ, ಬಿಜೆಪಿ ಉಪಸಭಾಧ್ಯಕ್ಷ ಸ್ಥಾನ ಪಡೆಯಲು ಬೆಂಬಲಿಸಬೇಕು ಎಂದು ಜೆಡಿಎಸ್‌ನ 13 ಪರಿಷತ್ ಸದಸ್ಯರು, ದೇವೇಗೌಡರು ಹಾಗೂ ಹೆಚ್.ಡಿ. ಕುಮಾರಸ್ವಾಮಿ ಜೊತೆ ನಡೆಸಿದ ಚರ್ಚೆಯಲ್ಲಿ ನಿರ್ಧರಿಸಲಾಗಿದೆ ಎಂದಿದ್ದಾರೆ.

ಸದನದ ಹಿರಿಯ ಸದಸ್ಯನಾದ ನಾನು ಸಭಾಧ್ಯಕ್ಷ ಸ್ಥಾನ ಪಡೆಯಬೇಕು ಎಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. ನಾವು ಸಭಾಧ್ಯಕ್ಷ ಸ್ಥಾನ ಪಡೆಯಲಿದ್ದೇವೆ. ಬಿಜೆಪಿಯವರು ಉಪಸಭಾಧ್ಯಕ್ಷ ಸ್ಥಾನ ಪಡೆಯಲಿದ್ದಾರೆ ಎಂದು ಹೊರಟ್ಟಿ ತಿಳಿಸಿದ್ದಾರೆ.

ಪ್ರಸಕ್ತ ಕಾಂಗ್ರೆಸ್‌ನ ಕೆ. ಪ್ರತಾಪಚಂದ್ರ ಶೆಟ್ಟಿ ವಿಧಾನಸಭಾಧ್ಯಕ್ಷ ರಾಗಿದ್ದಾರೆ. ಅವರ ವಿರುದ್ಧ ಬಿಜೆಪಿ ಅವಿಶ್ವಾಸ ನಿಲುವಳಿ ಮಂಡಿಸಿದೆ.

# ಹೊಳೆಸಿರಿಗೆರೆ : ಶ್ರೀ ರಾಮ ಮಂದಿರ ದೇಣಿಗೆ ಸಂಗ್ರಹಕ್ಕೆ ಚಾಲನೆ



ಮಲೇಬೆನ್ನೂರು, ಜ.25- ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ನಿರ್ಮಾಣಕ್ಕಾಗಿ ಹೊಳೆಸಿರಿಗೆರೆಯಲ್ಲಿ ದೇಣಿಗೆ ಸಂಗ್ರಹ ಕಾರ್ಯವನ್ನು ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಅವರು ಸೋಮವಾರ ಆರಂಭಿಸಿದರು. ತಾ.ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಬಿ. ಶೇಖರಪ್ಪ, ಎಂ. ರವಿಕುಮಾರ್, ರುದ್ರೇಶ್ ಮತ್ತಿತರರು ಹಾಜರಿದ್ದರು.

# ಮೀಸಲಾತಿ ನೀಡಲು ಮೀನಾ ಮೇಷ : ಬಸವ ಜಯ ಮೃತ್ಯುಂಜಯ ಸ್ವಾಮೀಜಿ

**ಹರಪನಹಳ್ಳಿ**

ಹರಪನಹಳ್ಳಿ, ಜ.27 - ರಾಜ್ಯದಲ್ಲಿ ರೈತಾಪಿ ವರ್ಗ, ಶ್ರಮ ಜೀವಿಗಳಾದ ಲಿಂಗಾಯಿತ ಪಂಚಮಸಾಲಿ, ವಾಲ್ಮೀಕಿ ನಾಯಕ ಸಮಾಜ, ಕುರುಬ ಸಮಾಜದವರಿಗೆ ಮೀಸಲಾತಿ ನೀಡಬೇಕು ಎಂದು ಜಗದ್ಗುರು ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದ ಸಂಡೂರು ಕೇರಿಯಲ್ಲಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿ, ಸಂಗೊಳ್ಳಿ ರಾಯಣ್ಣ ಹಾಗೂ ಕಿತ್ತೂರು ಚನ್ನಮ್ಮ ಅವರಿಗೆ ಇದ್ದಂತಹ ಅವಿನಾಭಾವ ಸಂಬಂಧ ಇಂದು ಪಚಮಸಾಲಿ ಹಾಗೂ ಕುರುಬ ಸಮಾಜದ ಬಂಧುಗಳಲ್ಲಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.


ಎಲ್ಲಾ ಸಮಾಜದವರೊಂದಿಗೆ ಅನ್ಯೂನ್ಯತೆಯಿಂದ ಪಂಚಮಸಾಲಿ ಬಾಂಧವರು ಹೊಂದಿಕೊಂಡಿದ್ದಾರೆ. ಆದ್ದರಿಂದಲೇ ಇಂದು ನಮ್ಮ ಮೀಸಲಾತಿ ಹೋರಾಟಕ್ಕೆ ಅವರು ಬೆಂಬಲ ನೀಡುತ್ತಿದ್ದಾರೆ ಎಂದರು.

ನಮ್ಮ ಹಕ್ಕನ್ನು ಕೇಳುತ್ತಿದ್ದೇವೆ. ಶಿಕ್ಷಣ ಹಾಗೂ ಉದ್ಯೋಗಕ್ಕೆ ಮಾತ್ರ 2ಎ ಮೀಸಲಾತಿ ನೀಡಲು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪರಮಾಧಿಕಾರವಿದೆ. ಅವರು ಬೆಳಗಾಂ ಅಧಿವೇಶನದಲ್ಲಿ ಭರವಸೆ ನೀಡಿದ್ದರಾದರೂ ಇಲ್ಲಿಯವರೆಗೆ ಅದನ್ನು ಈಡೇರಿಸಿಲ್ಲ. ಕೂಡಲೇ ನಮ್ಮ ಬೇಡಿಕೆಯನ್ನು ಪರಿಗಣಿಸಬೇಕು. ಪಂಚಮಸಾಲಿ ಸಮಾಜದವರು ತ್ಯಾಗಕ್ಕೆ ಹೆಸರು ವಾಸಿಗಳು. ಇನ್ನೂ ಮುಂದೆ ಅವರನ್ನು ಕೆರಳಿಸುವಂತೆ ನಡೆದು ಕೊಳ್ಳಬೇಡಿ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕುರುಬ ಸಮಾಜದ ಮುಖಂಡರಾದ ಹೆಚ್.ಬಿ.ಪರಶುರಾಮಪ್ಪ, ಸಾಬಳ್ಳಿ ಜಂಬಣ್ಣ, ಇದ್ಲಿ ರಾಮಪ್ಪ, ಎಸ್.ಆರ್.ತಿಮ್ಮಣ್ಣ, ಅಲಮರಸಿಕೇರಿ ಪರಶುರಾಮ, ಪುರಸಭೆ ಸದಸ್ಯ ಭರತೇಶ್, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಕೆ. ಹಾಲೇಶ್, ಆಲದಹಳ್ಳಿ ಷಣ್ಮುಖಪ್ಪ, ಪಂಚಮಸಾಲಿ ಸಮಾಜದ ವಿಜಯಾನಂದ ಕಾಶಪ್ಪನವರ್, ಎನ್.ಕೊಟ್ರೇಶ್, ಎಂ.ಟಿ. ಸುಭಾಶ್ಚಂದ್ರ, ಪೂಜಾರ ಶಶಿಧರ್, ವೀರಣ್ಣ, ನಾಗರಾಜ್, ಚಂದ್ರಶೇಖರ್ ಪೂಜಾರ, ಓಂಕಾರಗೌಡ, ಹೆಚ್. ಮಲ್ಲಿಕಾರ್ಜುನ, ಪರಸಪ್ಪ ಹಾಗೂ ಇತರರು ಭಾಗವಹಿಸಿದ್ದರು.



# ರಾಷ್ಟ್ರಮಟ್ಟದ ಪವರ್‌ಲಿಫ್ಟಿಂಗ್‌ಗೆ ಅಕ್ಷಯ್‌ಕುಂಬಾರ್ ಆಯ್ಕೆ




ದಾವಣಗೆರೆ, ಜ.27 - ನಗರದ ಶ್ರೀಸಾಯಿ ಜಿಮ್ನಾಷಿಯಂ ಮತ್ತು ಶ್ರೀ ಸಾಯಿ ಹೈಟೆಕ್ ಜಿಮ್ ಮತ್ತು ಅಮೆಚರ್ ಪವರ್‌ಲಿಫ್ಟಿಂಗ್ ಸಂಸ್ಥೆ ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಅಕ್ಷಯ್ ಟಿ ಕುಂಬಾರ್ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರಿಗೆ ಕುಂಬಾರ್ ಸಮಾಜ ಬಾಂಧ ವರು ಹಾಗೂ ಗೆಳೆಯರ ಬಳಗದವರು ಅಭಿನಂದಿಸಿದ್ದಾರೆ.

# ಹೊನ್ನಾಳಿಯ ಶ್ರೀ ಹಳದಮ್ಮದೇವಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ

ಮುಜರಾಯಿ ಇಲಾಖೆಗೆ ಸೇರಿರುವ ತಾಲ್ಲೂಕಿನ ಮಾರಿಕೊಪ್ಪ ಗ್ರಾಮದ ಶ್ರೀ ಹಳದಮ್ಮದೇವಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಇಂದು ಬೆಳಿಗ್ಗೆ 11ಕ್ಕೆ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ತಹಸೀಲ್ದಾರ್ ಬಸನಗೌಡ ಕೋಟೂರ, ತುಷಾರ್ ಬಿ. ಹೊಸೂರ್, ರಾಜ್ಯ ಸ್ಲಂ ಬೋರ್ಡ್ ಅಧ್ಯಕ್ಷೆ ಗೀತಾ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ ಮತ್ತಿತರರು ಭಾಗವಹಿಸುವರು.

ಇದೇ ಸಂದರ್ಭದಲ್ಲಿ ಶ್ರೀ ಹಳದಮ್ಮದೇವಿ ಭಕ್ತಿಗೀತೆಗಳ ಧ್ವನಿಸುರುಳಿ ಬಿಡುಗಡೆ ಮಾಡಲಾಗುವುದು. ಶ್ರೀಮತಿ ಗಂಗಮ್ಮ ಲಾರಿ ಹಳದಪ್ಪ ಅವರ ಕುಟುಂಬದ ವತಿಯಿಂದ ರೊಟ್ಟಿ-ಬುತ್ತಿ ಪ್ರಸಾದದ ವ್ಯವಸ್ಥೆ ಇದೆ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಡಾ: ಸಿದ್ದೇಶ್ ಎಸ್.ಬಿನ್ ಸಿದ್ದಪ್ಪ, 38 ವರ್ಷ, ವಾಸ, ಡೋರ್ ನಂ.1675/237, 'ಹಂಸ ಸದನ' ಕಲ್ಪತರು ಕಾನ್ವೆಂಟ್ ಪಕ್ಕ, ಹೊಸ ನಿಟ್ಟುವಳ್ಳಿ, ದಾವಣಗೆರೆ-577004 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಶ್ರೀ ಜಿ.ಎನ್ ಶಿವಪ್ರಸಾದ್ ಬಿನ್ ಶ್ರೀ ನಿಜಲಿಂಗಪ್ಪ ವಾಸ: ಡೋರ್ ನಂ 1137/08, 4ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ ಇವರಿಂದ ಈ ಕೆಳಕಂಡ ಷೆಡ್ಯೂಲ್ ಸೈಟನ್ನು ಶುದ್ಧ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸಾರ್ವಜನಿಕರು ಯಾರೇ ಆಗಲೀ ತಂಟೆ-ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ಪ್ರಕಟಣೆಯು ಪ್ರಕಟಗೊಂಡ 15 ದಿನಗಳ ಒಳಗಾಗಿ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಆನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಇತರೆಯವರಿಗೆ ಷೆಡ್ಯೂಲ್ ಆಸ್ತಿಯ ಬಗ್ಗೆ ಯಾವುದೇ ಹಕ್ಕು ಹಿತಸಂಬಂಧ ಹಾಗೂ ಆಸಕ್ತಿಯಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತೇನೆ.

**ಷೆಡ್ಯೂಲ್**

ದಾವಣಗೆರ ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಆವರಗೆರೆ ವಿಭಾಗದಲ್ಲಿ ದಾಖಲಾಗಿರುವ ಸುಬ್ರಮಣ್ಯ ನಗರದಲ್ಲಿರುವ ಸೈಟ್‌ಗಳ ಪೈಕಿ ನಗರಪಾಲಿಕೆಯ ವಾರ್ಡ್ ನಂ 41, ಪುಸ್ತಕ ಸಂಖ್ಯೆ- 58, ಪುಟ ಸಂಖ್ಯೆ - 65 ವುಳ್ಳ, ಸೈಟ್ ನಂ 45 ಇದರ ಚಾಲ್ತಿ ಡೋರ್ ನಂ.380/45, ಅಳತೆ 30x59+62/2 ಅಡಿ (ಪೂರ್ವ ಪಶ್ಚಿಮ 30 ಅಡಿ, ಉತ್ತರ-ದಕ್ಷಿಣ 30x59+52/2) = 1815 ಚದುರಡಿಯಿದ್ದು, ಮೀಟರ್‌ಗಳಲ್ಲಿ ಪೂರ್ವ ಪಶ್ಚಿಮ 9.143 ಮೀಟರ್, ಉತ್ತರ 17.982 + 18.896/2 ಚದುರ ಮೀಟರ್ ಇದಕ್ಕೆ ಚಕ್ಕುಬಂದಿ :- **ಪೂರ್ವಕ್ಕೆ-ಸೈಟ್ ನಂ.46, ಪಶ್ಚಿಮಕ್ಕೆ - ಸೈಟ್ ನಂ.44, ಉತ್ತರಕ್ಕೆ- ಸೈಟ್ ನಂ.38, ದಕ್ಷಿಣಕ್ಕೆ-30 ಅಡಿ ಕಾಮನ್ ರಸ್ತೆ ಈ ಮಧ್ಯದ ಪೂರಾ ಸ್ವತ್ತು.**

**ಬಿ.ಜಿ. ಚೇತನ್ ಕುಮಾರ್,** M.A.. LLB
ವಕೀಲರು, ದಾವಣಗೆರೆ ಮೊ: **94483 45683**
ದಿನಾಂಕ 27.01.2021

**ಸಿದ್ದೇಶ್ ಎಸ್.**
**ಕಕ್ಷಿದಾರರು**
**ಮೊ: 99008 97638**

## ಸಾರ್ವಜನಿಕ ತಿಳುವಳಿಕೆ ನೋಟಿಸ್

ನಮ್ಮ ಕಕ್ಷಿದಾರರಾದ **ಶ್ರೀ ಸೈಯದ್ ಇನಾಯಿತ್‌ವುಲ್ಲಾ** ಬಿನ್ **ಮಹಮ್ಮದ್ ಅಲಿ,** ದಾವಣಗೆರೆ ಇವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮಹಮ್ಮದ್ ಇಕ್ಬಾಲ್ ಸಾಬ್ ಬಿನ್ ಅಬ್ದುಲ್ ಅಜೀಜ್ ಸಾಬ್ ಮತ್ತು ಶ್ರೀಮತಿ ಶಹೀದಾಬಿ ಕೋಂ ಮಹಮ್ಮದ್ ಇಕ್ಬಾಲ್ ಸಾಬ್, ಜಿ.ಪಿ.ಎ ಹೋಲ್ಡರ್, ಇವರುಗಳೊಂದಿಗೆ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಚಿಸಿದ್ದು, ದಿನಾಂಕ : 04.12.2019 ರಂದು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಕ್ರಯದ ಕರಾರು ಪತ್ರವನ್ನು ಇಬ್ಬರೂ ಸೇರಿ ಬರೆದು ಕೊಟ್ಟಿದ್ದು, ಇದಕ್ಕೆ ಮುಂಗಡವಾಗಿ ನಮ್ಮ ಕಕ್ಷಿದಾರರು ಹಣ ಸಂದಾಯ ಮಾಡಿದ್ದು, ಉಳಿದ ಬಾಕಿ ಹಣವನ್ನು ಸಂದಾಯ ಮಾಡಲು ತಯಾರಿದ್ದರೂ ಷೆಡ್ಯೂಲ್ ಸ್ವತ್ತಿನ ಮಾಲೀಕರು ಕ್ರಯ ಪತ್ರ ಮಾಡಿಕೊಡಲು ನಿರಾಕರಿಸುತ್ತಾ ಬಂದಿದ್ದು, ಕಾರಣ, ನಮ್ಮ ಕಕ್ಷಿದಾರರು ಸ್ವತ್ತಿನ ಮಾಲೀಕರ ಮೇಲೆ ಮಾನ್ಯ ಅಪರ ಸಿವಿಲ್ ಜಡ್ಜ್‌ರವರ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಪಡೆಯಲು ದಾವಾ ಸಲ್ಲಿಸಿದ್ದು, **ದಾವಾ ನಂ.417/2020** ಇದ್ದು ಕಾರಣ ಈ ಮೂಲಕ ಸಮಸ್ತ ನಾಗರಿಕರಿಗೆ ತಿಳಿಯ ಪಡಿಸುವುದೇನೆಂದರೆ ಈ ದಾವೆಯು ಸಂಪೂರ್ಣವಾಗಿ ಇತ್ಯರ್ಥ ಆಗುವವರೆಗೂ ಯಾವುದೇ ತರಹದ ವ್ಯವಹಾರವನ್ನು ಷೆಡ್ಯೂಲ್ ಸ್ವತ್ತಿಗೆ ಸಂಬಂಧ ಪಟ್ಟಂತೆ ಮಾಡಬಾರದೆಂದು ಮತ್ತು ನನ್ನ ಕಕ್ಷಿದಾರರ ಹೊರತು ಬೇರೆ ಯಾರಿಗೂ ಷೆಡ್ಯೂಲ್ ಸ್ವತ್ತಿನ ಮಾಲೀಕರಿಗೆ ಪರಭಾರೆ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

**-:ಷೆಡ್ಯೂಲ್:-**

ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಕರೂರು ಗ್ರಾಮದ ಸರ್ವೆ ನಂ.12/33 ರಲ್ಲಿ ಖರಾಬು ವಜಾ ಜಾತ 21 ಗುಂಟೆ ಜಮೀನಿನ ಪೈಕಿ 18 ಗುಂಟೆಯನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರು ALN: Sakala:CR:**429/14-15** ಮತ್ತು ALN: Sakala:CR:**107/15-16** ದಿನಾಂಕ 16.06.2015 ರಂದು ಆದೇಶ ಮಾಡಿದ್ದು, ಇದಕ್ಕೆ ಚೆಕ್ಕುಬಂದಿ:-

**ಪೂರ್ವಕ್ಕೆ:** ನೋಬಲ್ ಟಾರ್ಪಾಲಿನ್ ಇವರ ಸ್ವತ್ತು **ಪಶ್ಚಿಮಕ್ಕೆ:** ಸರ್ವೆ ನಂ.18 ರ ಸ್ವತ್ತು

**ಉತ್ತರಕ್ಕೆ:** ಎ.ಜೆ. ವಿಠಲ್‌ರವರ ಸ್ವತ್ತು **ದಕ್ಷಿಣಕ್ಕೆ:** ಇದೇ ಸರ್ವೆ ನಂಬರ್‌ನಲ್ಲಿ ಉಳಿದಿರುವ 9 ಗುಂಟೆ ಜಮೀನು.

**ಸ್ಥಳ:** ದಾವಣಗೆರೆ **ದಿನಾಂಕ:** 27.01.2021

ವಕೀಲರ ಸಹಿ/-
**(ನೂರುಲ್ ಹಮೀದ್),** ಬಿ.ಕಾಂ.ಎಲ್.ಎಲ್.ಎಮ್.,
Advocate & Dist Incharge (APCR) Protection of Civil Rights,
#169, E.S.I. Hospital Road, Sir Mirza Ismall Nagar,
Davanagere-577001, Karanataka, Mob: **95911 11627**

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀಮತಿ ಮಮತ ಕೋಂ ನಾಗರಾಜ್,** ವಾಸ : ಟಿ ನುಲೇನೂರು ಗ್ರಾಮ: ಅಂಚೆ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಹಾಗೂ ಇತರರು**ಮಾನಂಗಿ ಮುರಿಗೆಪ್ಪ ಯಾನೆ ಕೆ.ಎಂ. ಮುರಿಗೆಪ್ಪ ಬಿನ್ ಲೇಟ್ ಬಸಪ್ಪ** ವಾಸ, ಕಂದಗಲ್ಲು ಗ್ರಾಮ, ದಾವಣಗೆರೆ ತಾಲ್ಲೂಕು ಜಿಲ್ಲೆ ಹಾಗೂ ಇತರರ ವಿರುದ್ಧ ಈ ಕೆಳಕಂಡ ಷೆಡ್ಯೂಲ್ ಆಸ್ತಿಗೆ (ದಾವಾ ಐಟಂ ನಂ.8) ಹಾಗೂ ಇತರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾವಣಗೆರೆಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಸಿ.ಜೆ.ಎಂ. ನ್ಯಾಯಾಲಯದಲ್ಲಿ ಅಸಲು ದಾವೆ ನಂ.138/2020 ನ್ನು ಪಾಲು ವಿಭಾಗ ಹಾಗೂ ಇತರೆ ಪರಿಹಾರ ಕೋರಿ ಸಲ್ಲಿಸಿದ್ದು, ಸದರಿ ದಾವೆಯು ಮಾನ್ಯ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುತ್ತದೆ. ಈಗ ಸದರಿ ದಾವೆಯ ಪ್ರತಿವಾದಿಗಳು ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ನಮ್ಮ ಕಕ್ಷಿದಾರರಿಗೆ ತಿಳಿಯದಂತೆ ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವರೆಂದು ನಮ್ಮ ಕಕ್ಷಿದಾರರಿಗೆ ತಿಳಿದು ಬಂದಿದ್ದು ಸದರಿ ಆಸ್ತಿಯನ್ನು ಯಾರಾದರೂ ಖರೀದಿಸಿದಲ್ಲಿ ಮುಂದೆ ಆಗುವ ತೊಂದರೆಗಳಿಗೆ ಖರೀದಿದಾರರೇ ಜವಾಬ್ದಾರರಾಗಿರುತ್ತಾರೆಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಿರಮಗೊಂಡನಹಳ್ಳಿ ಗ್ರಾಮದ ರಿ.ಸರ್ವೆ ನಂ. 54/6ರಲ್ಲಿ 2 ಎಕರೆ ಜಮೀನು, ಇದಕ್ಕೆ ಚಕ್ಕುಬಂದಿ:-
**ಪೂರ್ವಕ್ಕೆ - ಚಾನಲ್, ಪಶ್ಚಿಮಕ್ಕೆ- ಕಮಲಮ್ಮ ಕೋಂ ಸೋಮಶೇಖರಪ್ಪನವರ ಜಮೀನು, ಉತ್ತರಕ್ಕೆ - ವೆಂಕಟೇಶ್ ಪ್ರಸಾದ್‌ರವರ ಜಮೀನು, ದಕ್ಷಿಣಕ್ಕೆ - ಕೆ.ಶಿವಲಿಂಗಪ್ಪನವರ ಜಮೀನು**

ವಕೀಲರ ಸಹಿ
**ಕಕ್ಷದಾರರ ಸಹಿ/-** **(ಕೆ.ಎಸ್. ರೇವಣಸಿದ್ದಪ್ಪ)**

## ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ಮಾನ್ಯರೇ,

ದಿ ದಾವಣಗೆರೆ ಕ್ಲಬ್‌ನ ಆಡಳಿತ ಮಂಡಳಿ ಸದಸ್ಯರ 2020-2021 ರಿಂದ 2022-2023 ರವರೆಗೆ 3 ವರ್ಷಗಳ ಅವಧಿಗೆ ನಡೆಯಲಿರುವ ಚುನಾವಣೆಯಲ್ಲಿ **ಶ್ರೀ ಮತ್ತಿಹಳ್ಳಿ ವೀರಣ್ಣ,** ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ಇವರ ನೇತೃತ್ವದಲ್ಲಿ ನಾವುಗಳು 11 ಜನ ವಿವಿಧ ಸ್ಥಾನಗಳಿಗೆ ಸ್ಪರ್ಧಿಸಿರುತ್ತೇವೆ.
ಕ್ಲಬ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ಕೆಳಕಂಡ ನಮಗೆ ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿ.

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 1 | ಮತ್ತಿಹಳ್ಳಿ ವೀರಣ್ಣ | ಅಧ್ಯಕ್ಷ | | | |
| 1 | ಚಂದ್ರಶೇಖರ್ ಎ.ಬಿ. (ABC) | ಉಪಾಧ್ಯಕ್ಷ | | | |
| 2 | ರಾಜಶೇಖರ್ ಎಂ.ಕೆ. (ಕೈದಾಳೆ ರಾಜು) | ಗೌರವ ಕಾರ್ಯದರ್ಶಿ | | | |
| 1 | ಉಳವಯ್ಯ ಎಸ್.ಜಿ. | ಗೌರವ ಸಹ ಕಾರ್ಯದರ್ಶಿ | | | |
| 2 | ಲಿಂಗರಾಜ್ ವಾಲಿ ಹೆಚ್.ಸಿ. | ಕೋಶಾಧ್ಯಕ್ಷ | | | |
| ನಿರ್ದೇಶಕರ ಸ್ಥಾನಗಳು | | | | | |
| 2 | ಕೊಟ್ರೇಶ್ ಎನ್. (ANK) | | | | |
| 4 | ಜಯರಾಜ್ ಎಸ್. ಕಶೆಟ್ಟರ್ | | | | |
| 7 | ಪ್ರಶಾಂತ ಗುಪ್ತಾ ಎಸ್.ಕೆ. | | | | |
| 12 | ರುದ್ರೇಶ್ ಹೆಚ್.ವಿ. | | | | |
| 13 | ಶ್ರೀನಿವಾಸಮೂರ್ತಿ ಆರ್.ಜಿ. | | | | |
| 14 | ಶಿವಯೋಗಿ ಬಿ.ವಿ. (ಬೂಸ್ನೂರ್) | | | | |

ವಿ.ಸೂ. : ಒಬ್ಬ ಸದಸ್ಯರು ಒಂದೊಂದರಂತೆ ಅಧ್ಯಕ್ಷ, ಉಪಾಧ್ಯಕ್ಷ, ಗೌರವ ಕಾರ್ಯದರ್ಶಿ, ಗೌರವ ಸಹ ಕಾರ್ಯದರ್ಶಿ, ಕೋಶಾಧ್ಯಕ್ಷ ಸ್ಥಾನಗಳಿಗೆ ಮತ್ತು 6 ನಿರ್ದೇಶಕ ಸ್ಥಾನಗಳಿಗೆ ತಲಾ ಒಂದರಂತೆ ಒಟ್ಟು 11 ಮತಗಳನ್ನು ಚಲಾಯಿಸತಕ್ಕದ್ದು.

ಮತದಾನದ ದಿನಾಂಕ : 31-01-2021ನೇ ಭಾನುವಾರ
ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.
ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ

# ಅಖಂಡತೆ, ಅಸ್ಮಿತೆ, ಸಾರ್ವಭೌಮತ್ವಕ್ಕೆ ಬದ್ಧರಾಗಬೇಕು

## ಕೂಡ್ಲಿಗಿ ತಹಶೀಲ್ದಾರ್ ಮಹಾಬಲೇಶ್ವರ ಅಭಿಮತ



ಕೂಡ್ಲಿಗಿ, ಜ. 27- ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಅಖಂಡತೆ, ಅಸ್ಮಿತೆ ಹಾಗೂ ಸಾರ್ವಭೌಮತ್ವಕ್ಕೆ ಎಲ್ಲರೂ ಬದ್ದರಾಗಬೇಕಿದೆ ಎಂದು ಕೂಡ್ಲಿಗಿ ತಹಶೀಲ್ದಾರ್ ಮಹಾಬಲೇಶ್ವರ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಮಹದೇವ ಮೈಲಾರ ಕ್ರೀಡಾಂಗಣದಲ್ಲಿ ತಾಲ್ಲೂಕು ಆಡಳಿತ ಆಯೋಜಿಸಿದ್ದ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಅವರು ಮಾತನಾಡುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಸಂವಿಧಾನ ರಚನೆ ಬಹುಮುಖ್ಯ ಪಾತ್ರ ವಹಿಸಿದ್ದು, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ರಾಜೇಂದ್ರ ಪ್ರಸಾದ್ ಮುಂತಾದವರು ಲಿಖಿತ ಸಂವಿಧಾನ ರಚನೆ ಮಾಡುವುದರ ಮೂಲಕ ಜಗತ್ತಿನ ಗಮನ ಸೆಳೆದರು. ಇಂದು ಸಂವಿಧಾನ, ಪ್ರಜಾಪ್ರಭುತ್ವದ ವ್ಯವಸ್ಥೆ ಗಟ್ಟಿಗೊಳ್ಳಬೇಕಾದರೆ ಮತೀಯ ಶಕ್ತಿಗಳಿಂದ ಇಡೀ ದೇಶದ ಅಖಂಡತೆಯನ್ನು ಉಳಿಸಿಕೊಂಡು ಹೋಗಬೇಕಿದೆ. ಈ ದೇಶದ ಗಣತಂತ್ರ ವ್ಯವಸ್ಥೆಗೆ ಮತ್ತಷ್ಟು ಬಲ ತುಂಬಬೇಕಿದೆ ಎಂದರು.

ಶಾಸಕ ಎನ್.ವೈ. ಗೋಪಾಲಕೃಷ್ಣ ಮಾತನಾಡಿ, ಇಂದು ಕೆಲವು ಶಕ್ತಿಗಳು ಜಾತಿ, ಧರ್ಮಗಳ ಹೆಸರಿನಲ್ಲಿ ದೇಶದ ಅಖಂಡತೆಗೆ ಧಕ್ಕೆ ತರಲು ಪ್ರಯತ್ನಿಸುತ್ತಿದ್ದು, ದೇಶಪ್ರೇಮ, ದೇಶ ಭಕ್ತಿ ಬೆಳೆಸಿಕೊಳ್ಳುವ ಮೂಲಕ ಯುವಪೀಳಿಗೆಗೆ ಭಾರತೀಯತೆ ಮಂತ್ರವಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಅಮಿನುದ್ದೀನ್ ಬಾಷಾ, ವೀರೇಶ್, ಮಹಾಂತೇಶ್, ಮಹೇಶ್ ಸೇರಿದಂತೆ ಕೃಷಿ, ಆರೋಗ್ಯ ಇತರೆ ರಂಗಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಾ.ಪಂ. ಅಧ್ಯಕ್ಷರಾದ ಕೆ.ನಾಗ ರತ್ನಮ್ಮ ನಿಂಗಪ್ಪ, ಪ.ಪಂ.ಅಧ್ಯಕ್ಷರಾದ ಕೆ.ಶಾರದಾಬಾಯಿ, ಉಪಾಧ್ಯಕ್ಷರಾದ ಊರಮ್ಮ, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಜಿ.ಎಂ. ಬಸಣ್ಣ, ಕೂಡ್ಲಿಗಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಿ.ಶಿವರಾಜ, ತಾ.ಪಂ. ಸದಸ್ಯರಾದ ಜಿ.ಪಾಪನಾಯಕ, ಕೆ.ಚಿನ್ನಾಪ್ರಪ್ಪ, ಹಂಪಜ್ಜರ ಕೊಟ್ರೇಶ್, ಪ.ಪಂ.ಸದಸ್ಯ ರಾದ ರೇಣುಕಾ ಎಸ್.ದುರುಗೇಶ್, ಕೆ.ಶಿವಪ್ಪ ನಾಯಕ, ಡಿ.ವೈ.ಎಸ್.ಪಿ. ಹರೀಶ್ ರೆಡ್ಡಿ, ಸಿಪಿಐ ವಸಂತ ವಿ.ಅಸೋದೆ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ವಾಮದೇವ, ಉಪನ್ಯಾಸಕ ಸುಭಾ ಶ್ಚಂದ್ರಬೋಸ್ ಮುಂತಾದವರು ಉಪಸ್ಥಿತರಿದ್ದರು.

## ಬನಶಂಕರಿಗೆ ನಮಿಸೋಣ

ಬನದ ಹುಣ್ಣಿಮೆ ಬಂದಿಹುದು
ಬನಶಂಕರಿ ದೇವಿಗೆ ನಮಿಸೋಣ
ತನುಮನದಿಂದ ನೆನೆಯೋಣ
ಅನನ್ಯ ಭಕ್ತಿಯಲಿ ತೇಲೋಣ

ಸಿಂಹವಾಹಿನಿಗೆ ಎರಗೋಣ
ಸಂಕಟ ಕಳೆಯೆಂದು ಬೇಡೋಣ
ಪಂಕಜದಂಥ ಸುಕೋಮಲ ಚರಣ
ಸಂತತ ಧ್ಯಾನದಿ ನಿಲಿಸೋಣ

ನಿಂಬೆ ಹಾರದಿ ಅಲಂಕರಿಸಿ
ನಿಂಬೆ ದೀಪಗಳ ಹಚ್ಚೋಣ
ಅಂಬೆಗೆ ಅರ್ಚನೆ ಮಾಡೋಣ
ನಂಬಿದೆ ನಿನ್ನನೆ ಎನ್ನೋಣ

ದುಷ್ಟರ ಸಂಹರಿಸಿ ಕಾಯ್ವವಳೆ
ಕಷ್ಟ ಕಳೆದು ಸುಖ ಕೊಡುವವಳೆ
ನಿಷ್ಠೆ ಶ್ರದ್ಧೆಗೆ ಸದಾ ಒಲಿವವಳೆ
ವಿಶಿಷ್ಠ ರೂಪದಿ ಜಗ ಕಾಯ್ವವಳೆ

ಬನದಿ ನಿಂದವಳೆ ಸಲಹಲೆಂದು
ಅನುಪಮ ಶಾಖಾಂಬರಿ ನೀನಿಂದು
ಮನುಕುಲಕೆ ಆಹಾರ ನೀಡೆಂದು
ನಮಿಪೆ ಸಿರಿಹರಿ ಸೋದರಿ ಇಂದು

ಬನದ ಹುಣ್ಣಿಮೆ ಪ್ರಯುಕ್ತ

## ಬನಶಂಕರಿ ದೇವಿಗೆ ನಮನ

ಬನ ಬನ ಬನದೇವತೆ ಬನಶಂಕರಿ
ಮನ ಮನದಲಿ ತುಂಬಮ್ಮ ಶಿವಶಂಕರಿ
ತನುಮನ ನಿನಗರ್ಪಿಸಿಹೆ ಶಾಖಾಂಬರಿ
ಅನುಪಮ ಆನಂದಮಯಿ ಶಾತೋದರಿ

ಅಣು ಅಣುವಲು ತುಂಬಿಹ ಅನ್ನಪೂರ್ಣೇಶ್ವರಿ
ಕಣ ಕಣಕು ಶಕ್ತಿ ಕೊಡುವ ಕನಕಾಂಬರಿ
ಅನುಕ್ಷಣವೂ ನೆನೆವಂತೆ ಮಾಡು ಹೇ ಈಶ್ವರಿ
ಬಣ್ಣ ಬಣ್ಣದ ಪ್ರಕೃತಿ ಮಾತೆ ಭುವನೇಶ್ವರಿ

ಹರನ ಅರ್ಧಾಂಗಿಯೇ ಪಾಹಿ ಕಾಮೇಶ್ವರಿ
ತರಿದು ರಕ್ಕಸರನು ಪೊರೆಯೇ ಭಯಂಕರಿ
ಉರಿವ ಜ್ವಾಲೆಯು ನೀನೆ ಶ್ರೇಷ್ಠೆ ಕಮಲೇಶ್ವರಿ
ಸುರಿವ ಆನಂದ ನೀನೆ ರಾಜೇಶ್ವರಿ

ಶರಣಾಗಿಹೆನಮ್ಮ ಸಲಹು ಜಗದೀಶ್ವರಿ
ಕರುಣಾರಸವನ್ನು ಹರಿಸು ವಿಶ್ವೇಶ್ವರರಿ
ಪರಮಾಪ್ತಳು ನೀನೆ ನನಗೆ ತ್ರಿಪುರೇಶ್ವರಿ
ಪರಿಪೂರ್ಣಳೆ ಕಾಯೌ ಸಿರಿಹರಿ ಸೋದರಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ಕೊಟ್ಟೂರಿನಲ್ಲಿ ಬನಶಂಕರಿ ದೇವಿ ರಥೋತ್ಸವ : ಚಂಡಿಕಾ ಹೋಮ



ಕೊಟ್ಟೂರು, ಜ.27- ಕೊಟ್ಟೂರಿನ ಕೌಲ್ ಪೇಟೆ ಬನಶಂಕರಿ ದೇವಿ ರಥೋತ್ಸವ ನಿಮಿತ್ತ ಮಂಗಳವಾರ ಬನಶಂಕರಿ ದೇವಾಲಯದಲ್ಲಿ ಹಮ್ಮಿಕೊಂಡಿದ್ದ ಚಂಡಿಕಾ ಹೋಮಕ್ಕೆ ಉಜ್ಜೈಯಿನಿ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಪೂರ್ಣಾಹುತಿ ನೀಡಿದರು. ನುಗ್ಗೆಹಳ್ಳಿ ಮಠದ ಮಹೇಶ್ವರ ಸ್ವಾಮೀಜಿ ಹಾಗೂ ಭಕ್ತರು ಈ ಸಂದರ್ಭದಲ್ಲಿ ಹಾಜರಿದ್ದರು.

# ದೇವರಬೆಳಕೆರೆಯ ಮೈಲಾರಲಿಂಗೇಶ್ವರ ಸ್ವಾಮಿ ಭಂಡಾರದ ಹುಣ್ಣಿಮೆ ಇಂದು

ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಭಂಡಾರದ ಹುಣ್ಣಿಮೆ ಕಾರ್ಯಕ್ರಮವು ಇಂದು ನಡೆಯುವುದು.

ಸಂಜೆ 7.30 ರಿಂದ ಭಂಡಾರ ಹುಣ್ಣಿಮೆ ಮತ್ತು ಭಂಡಾರ ಹಣಿಯುವುದು ಕಾರ್ಯಕ್ರಮ ಜರುಗುವುದು. ರಾತ್ರಿ 8.30 ಕ್ಕೆ ಶ್ರೀ ಸ್ವಾಮಿಯ ಪಲ್ಲಕ್ಕಿ ಉತ್ಸವ ರಾಜಬೀದಿಗಳಲ್ಲಿ ಜರುಗುವುದು.

ನಾಳೆ ಶುಕ್ರವಾರ ಸಂಜೆ 7 ಗಂಟೆಗೆ ಭಂಡಾರ ಅಳೆಯುವುದು ಮತ್ತು ಪ್ರಸಾದ ವಿತರಣೆಯನ್ನು ಹಮ್ಮಿಕೊಳ್ಳಲಾಗಿದೆ.

# ಬಿಜೆಪಿ ವಲಸಿಗರ 'ಹಠಾವೋ' ಅಭಿಯಾನ

(1ನೇ ಪುಟದಿಂದ) ಶಾಸಕರು ಬೆಂಬಲ ವ್ಯಕ್ತಪಡಿಸಿ, ಕೈಜೋಡಿಸಿದ್ದಾರೆ. ಆದರೆ ಅವರು ಅಂದಿನ ಸಭೆಯಲ್ಲಿ ಭಾಗವಹಿಸುತ್ತಿಲ್ಲ.

ಯಡಿಯೂರಪ್ಪ ಅವರನ್ನು ಅಧಿಕಾರಕ್ಕೆ ತಂದಿದ್ದೇವೆ ಎಂಬ ಒಂದೇ ಕಾರಣಕ್ಕೆ ಪಕ್ಷ ಮತ್ತು ಸರ್ಕಾರವನ್ನು ಈ ಮೂವರು ಸಚಿವರು ಸೇರಿದಂತೆ ಕೆಲವರು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಇವರಿಲ್ಲದಿದ್ದರೆ, ಸರ್ಕಾರವೂ ನಡೆಯುತ್ತದೆ. ಪಕ್ಷವೂ ಇರುತ್ತದೆ. ತಮ್ಮ ಸ್ವ ಶಕ್ತಿ ಬೆಳೆಸಿಕೊಳ್ಳಲು ಬಲವಾದ ಖಾತೆಗಳನ್ನು ಪಡೆದುಕೊಂಡಿದ್ದಾರೆ. ಇವರಿಂದ ಸಾರ್ವಜನಿಕರಿಗೆ ಯಾವುದೇ ಉಪಯೋಗ ವಿಲ್ಲ.

ಇಂತಹವರ ಬೆದರಿಕೆಗಳಿಗೆ ಮಣಿಯುತ್ತಾ ಹೋದರೆ, ಸರ್ಕಾರ ಮತ್ತು ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ. ಮೊದಲು ಇವರನ್ನು ಸಂಪುಟದಿಂದ ಕೈಬಿಡಿ, ಸರ್ಕಾರಕ್ಕೆ ಯಾವುದೇ ಗಂಡಾಂತರವಿರುವುದಿಲ್ಲ. ಇವರಿಂದ ತೆರವಾಗುವ ಸ್ಥಾನಗಳನ್ನು ಮೂಲ ಬಿಜೆಪಿಯ ಯಾವುದೇ ಶಾಸಕರಿಗೆ ಅಧಿಕಾರ ನೀಡಿ, ನೀವು ನೀಡಿದ ಹೊಣೆಗಾರಿಕೆಯನ್ನು ಅವರು ಸಮರ್ಥವಾಗಿ ನಿಭಾಯಿಸಲಿದ್ದಾರೆ.

ಇವರ ವರ್ತನೆಯಿಂದಲೇ ನೀವು ನಾಲ್ಕು ಬಾರಿ ಖಾತೆಗಳನ್ನು ಬದಲಾವಣೆ ಮಾಡುವ ಪರಿಸ್ಥಿತಿ ಬಂದಿತ್ತು. ಈ ಹಿಂದೆಲ್ಲ ಈ ಇಲಾಖೆಗಳ ಹೊಣೆಗಾರಿಕೆಯನ್ನು ವಹಿಸಿಕೊಂಡವರು ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ.

ಇವರಿಂದ ನಾವು ಪಾಠ ಕಲಿಯಬೇಕಿಲ್ಲ. ಯಾವುದೇ ಖಾತೆ ನೀಡಿದರೂ, ಅದನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂಬ ಭಾವನೆ ಇರಬೇಕು. ಅದನ್ನು ಬಿಟ್ಟು ಇಂತಹದ್ದೇ ಖಾತೆ ನೀಡಿ, ನಾವು ಹೇಳಿದಂತೆ ಮಾಡಿ ಎಂಬ ಇವರ ಒತ್ತಡಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ.

ಇಂತಹ ಪರಿಸ್ಥಿತಿ ಬಿಜೆಪಿ ಆಡಳಿತದ ಯಾವುದೇ ರಾಜ್ಯದಲ್ಲಿಲ್ಲ. ನೀವು ಇದನ್ನು ಮನಗಂಡು ತಕ್ಷಣವೇ ಈ ಮೂವರು ಸಚಿವರನ್ನು ಮಂತ್ರಿಮಂಡಲದಿಂದ ಕೈಬಿಡಿ.

ನೀವು ತೆಗೆದುಕೊಳ್ಳುವ ದೃಢ ನಿರ್ಧಾರ ಬೇರೆಯವರಿಗೂ ಎಚ್ಚರಿಕೆಯಾಗುತ್ತದೆ. ಅವರು ಪಕ್ಷದ ಶಿಸ್ತಿಗೆ ಒಳಗಾಗಿ ಕೆಲಸ ಮಾಡುತ್ತಾರೆ.

ನಿಮ್ಮ ನಾಯಕತ್ವದ ವಿರುದ್ಧವಾಗಿ ನಾವಿಲ್ಲ. ಸರ್ಕಾರ ಮತ್ತು ಪಕ್ಷಕ್ಕೆ ಕಳಂಕ ತರುತ್ತಿರುವ ಇಂತಹವರನ್ನು ನಿಮ್ಮ ಮಂತ್ರಿಮಂಡಲದಲ್ಲಿ ಇಟ್ಟುಕೊಳ್ಳಬಾರದೆಂಬ ನಿವೇದನೆ ಅಷ್ಟೇ ನಮ್ಮದು.

ಅವರ ವಿರುದ್ಧ ನಮ್ಮ ಹೋರಾಟ ನಿರಂತರವಾಗಿರುತ್ತದೆ. ಮುಂದೆ ಇದು ದೊಡ್ಡದಾಗಿ ಬೆಳೆಯಬಾರದೆಂಬ ಉದ್ದೇಶ ನಿಮಗಿದ್ದರೆ, ತಕ್ಷಣವೇ ನಮ್ಮ ಮನವಿಗೆ ಸ್ಪಂದಿಸಿ ಎಂದು ಈ ಬಂಡಾಯದ ಗುಂಪು ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಳ್ಳಲು ನಿರ್ಧರಿಸಿದ್ದಾರೆ.

# ಆಪ್‌ನಲ್ಲೇ ಪಿಂಚಣಿ ಯೋಜನೆಗೆ ಸಿಎಂ ಚಾಲನೆ

(1ನೇ ಪುಟದಿಂದ) ತಲುಪುವಂತಹ ಕಾರ್ಯಕ್ರಮ ಗಳನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿದೆ ಎಂದರು.

ಈ ಹಿಂದೆ ಸರ್ಕಾರದ ಸವಲತ್ತುಗಳು ದೊರೆಯಬೇಕಿದ್ದರೆ, ಕಚೇರಿಯಿಂದ ಕಚೇರಿಗೆ ಅಲೆದಾಡಬೇಕಾಗಿತ್ತು. ಮಧ್ಯವರ್ತಿಗಳ ಸಹಕಾರ ಪಡೆದುಕೊಳ್ಳಬೇಕಿತ್ತು. ಈಗ ಇದಕ್ಕೆಲ್ಲ ಕೊನೆ ಹಾಡಲಾಗಿದೆ ಎಂದವರು ತಿಳಿಸಿದ್ದಾರೆ.

ಪ್ರಸ್ತುತ ಹಿರಿಯ ನಾಗರಿಕ ಪಿಂಚಣಿ ಯೋಜನೆಯನ್ನು ಮನೆ ಬಾಗಿಲಿಗೆ ತಲುಪಿಸುವ ಯೋಜನೆ ಅನುಷ್ಠಾನಗೊಂಡಿದೆ. ಮುಂದಿನ ದಿನಗಳಲ್ಲಿ ಅಂಗವಿಕಲರ ಮತ್ತು ವಿಧವಾ ವೇತನ ಸೇರಿದಂತೆ ಎಲ್ಲ ರೀತಿಯ ಪಿಂಚಣಿಗಳು ಮನೆ ಬಾಗಿಲಿಗೆ ತಲುಪಲಿವೆ. ಸರ್ಕಾರದ ಪಿಂಚಣಿಗಳನ್ನು ಪಡೆಯಲು ವಾರ್ಷಿಕ ಆದಾಯವನ್ನು 12 ಸಾವಿರದಿಂದ 35 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಪ್ರತಿ ತಿಂಗಳು ಮೂರು ಸಾವಿರ ರೂ. ಆದಾಯ ಪಡೆಯುವ ಎಲ್ಲಾ ಹಿರಿಯ ನಾಗರಿಕರು ಈ ಸವ ಲತ್ತು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಅರ್ಜಿ ರಹಿತ ಮೊಬೈಲ್ ಆಪ್ ಮೂಲಕವೇ ಮನೆ ಬಾಗಿಲಿಗೆ ಮಾಸಾಶನ ನೀಡುವ ಯೋಜನೆಯನ್ನು ರೂಪಿಸಿರುವುದು ರಾಜ್ಯವೇ ಮೊದಲಾಗಿದೆ ಎಂದರು

# ಪರಿಷತ್ ಸಭಾಪತಿ ಸ್ಥಾನ ಜೆಡಿಎಸ್‌ಗೆ ನೀಡಲು ಯಡಿಯೂರಪ್ಪ ಆಸಕ್ತಿ

ಬೆಂಗಳೂರು, ಜ. 27 - ವಿಧಾನಪರಿಷತ್ತಿನ ಸಭಾಪತಿ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಸಕ್ತರಾಗಿದ್ದಾರೆ. ಕಾಂಗ್ರೆಸ್‌ನ ಪ್ರತಾಪ್ ಚಂದ್ರಶೆಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ಕೆಳಗಿಳಿಸಲು ಬಿಜೆಪಿ ಮತ್ತು ಜೆಡಿಎಸ್ ಅವರ ವಿರುದ್ಧ ಅವಿಶ್ವಾಸ ನಿರ್ಣಯ ತಂದಿದೆ.

ಇದೇ 29 ರಂದು ಸಭಾಪತಿ ಮತ್ತು ಉಪಸಭಾಪತಿ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಉಪಸಭಾಪತಿ ಸ್ಥಾನಕ್ಕೆ ಜೆಡಿಎಸ್ ಅಭ್ಯರ್ಥಿ ಹಾಕುತ್ತಿಲ್ಲ. ಇದುವರೆಗೂ ಜೆಡಿಎಸ್‌ನ ಧರ್ಮೇಗೌಡರು ಉಪಸಭಾಪತಿಯಾಗಿದ್ದರು. ಅವರ ಅಕಾಲಿಕ ಮರಣದಿಂದ ಈ ಸ್ಥಾನ ತೆರವುಗೊಂಡಿದೆ.

ಸಭಾಪತಿ ಸ್ಥಾನ ಪಡೆಯಲು ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಯಡಿಯೂರಪ್ಪ, ದೆಹಲಿ ವರಿಷ್ಠರೊಟ್ಟಿಗೆ ಮಾತುಕತೆ ನಡೆಸಿದ್ದಾರೆ.

ಸಭಾಪತಿ ಆಯ್ಕೆ ಸಂಬಂಧ ದೇವೇಗೌಡರು ನಿನ್ನೆ ರಾತ್ರಿ ಪರಿಷತ್ತಿನ ತಮ್ಮ ಶಾಸಕರೊಟ್ಟಿಗೆ ಸಮಾಲೋಚನೆ ನಡೆಸಿ, ಬಸವರಾಜ್ ಹೊರಟ್ಟಿ ಅವರನ್ನು ಈ ಸ್ಥಾನಕ್ಕೆ ತರಲು ತೀರ್ಮಾನ ಕೈಗೊಳ್ಳಲಾಯಿತು. ಪಕ್ಷದ ತೀರ್ಮಾನದಂತೆ ಹೊರಟ್ಟಿ ಅವರು ಇಂದು ಬೆಳಿಗ್ಗೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಜೆಡಿಎಸ್‌ಗೆ ಬಿಟ್ಟು ಕೊಡುವಂತೆ ಮನವಿ ಮಾಡಿಕೊಂಡರು. ಮನವಿಗೆ ಸ್ಪಂದಿಸಿದಂತೆ ಕಂಡು ಬಂದರೂ, ತಮ್ಮ ಪಕ್ಷದ ಶಾಸಕರ ಜೊತೆ ಚರ್ಚೆ ಮಾಡಿ, ನಮ್ಮ ನಿರ್ಣಯವನ್ನು ತಿಳಿಸುವುದಾಗಿ ಮುಖ್ಯಮಂತ್ರಿಯವರು ಹೊರಟ್ಟಿ ಅವರಿಗೆ ಹೇಳಿ ಕಳುಹಿಸಿದ್ದಾರೆ.

# ಹೆಚ್.ಬಿ. ಕರಿಬಸಮ್ಮರಿಂದ ರಾಮ ಮಂದಿರಕ್ಕೆ ದೇಣಿಗೆ



ದಾವಣಗೆರೆ,ಜ.27- ಅಯೋಧ್ಯೆಯ ಶ್ರೀ ರಾಮ ಮಂದಿರ ನಿರ್ಮಾಣದ ನಿಧಿ ಸಮರ್ಪಣಾ ಅಭಿಯಾನದಲ್ಲಿ 'ದಯಾ ಮರಣ' ಹೋರಾಟಗಾರ್ತಿಯೂ ಆಗಿರುವ ನಿವೃತ್ತ ಶಿಕ್ಷಕರಾದ ಶ್ರೀಮತಿ ಹೆಚ್.ಬಿ. ಕರಿಬಸಮ್ಮ ಅವರು ದೇಣಿಗೆ ಸಮರ್ಪಣೆ ಮಾಡಿದರು. ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ಉದ್ಯಮಿ ಟಿ.ಎಸ್. ಜಯರುದ್ರೇಶ್ ಮತ್ತಿತರರು ಉಪಸ್ಥಿತರಿದ್ದರು.


**ಸೈಟ್‌ಗಳು ಮಾರಾಟಕ್ಕಿವೆ**
ಬಾಟಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ, ಬನಶಂಕರಿ ಬಡಾವಣೆಯಲ್ಲಿ 50x50 ಕಾರ್ನರ್ ಉತ್ತರ ಪೂರ್ವ, ವಾಜಪೇಯಿ ಲೇಔಟ್‌ನಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ, ಪುಷ್ಪ ಮಹಾಲಿಂಗಪ್ಪ ಸ್ಕೂಲ್ ಹತ್ತಿರ 30x50 North, 40x60 North, 30x38 East, 60x38 East, 30x38, 30x38 East, ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಬೇಕಾಗಿದ್ದಾರೆ**
✦ ಕಂಪ್ಯೂಟರ್ ಆಪರೇಟರ್ ✦ ಮಹಿಳೆಯರು ✦ ಪುರುಷರು ✦ ಸೂಪರ್‌ವೈಸರ್ ✦ ಟೆಲಿಕಾಲರ್ ಮಹಿಳೆಯರು
ಯಾವುದೇ ಡಿಗ್ರಿ ಪಾಸಾಗಿರಬೇಕು.
8861438237, 7483088761

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಮನೆ ಮಾರಾಟಕ್ಕಿದೆ**
#1822, 2ನೇ (ಬಿ) ಕ್ರಾಸ್, 3ನೇ ಮೇನ್ ರೋಡ್ ವಿನೋಬನಗರ ದಾವಣಗೆರೆ 15'x44' ಅಳತೆಯ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ:
99167 02382
97389 24977

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ರಾಣೇಬೆನ್ನೂರು, ಹರಿಹರ, ಭರಮಸಾಗರಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿ ESI, PF ಸೌಲಭ್ಯವಿದೆ.
ಸಫಾಜ್ ಸೆಕ್ಯೂರಿಟಿ ಸರ್ವೀಸ್
ಎಸ್.ಎನ್.ಎ ಪ್ಲಾಜಾ, ವಿನೋಬನಗರ, 3ನೇ ಮೇನ್ ಪಿ.ಬಿ. ರೋಡ್, ದಾವಣಗೆರೆ.
91130 53483

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಪುರುಷರು ಮತ್ತು ಮಹಿಳೆಯರು, ಸೂಪರ್‌ವೈಸರ್,
Field Market, ಸಂಪರ್ಕಿಸಿ
9845279197, 8861438237

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ 30x50 ಪೂರ್ವ ಅಕ್ಕ-ಪಕ್ಕ 30x48 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ ದಕ್ಷಿಣ ಕಾರ್ನರ್
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂನ ಇಂಡಿಪೆಂಡೆಂಟ್ ಹೌಸ್ ಮಾರಾಟಕ್ಕಿದೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ತಕ್ಷಣ ಬೇಕಾಗಿದ್ದಾರೆ**
ಮಹಿಳೆಯರು, ಪುರುಷರು ಹಾಗೂ ವಿಧವೆ, ವಿಚ್ಛೇದಿತೆಯರು ತಕ್ಷಣ ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಯೊಂದಿಗೆ 10,000 ದಿಂದ 15,000 ದವರೆಗೂ ಸಂಬಳ ನೀಡಲಾಗುತ್ತದೆ.
63647 94445, 72593 06665
90353 24777

**ಬೇಕಾಗಿದ್ದಾರೆ**
ಫ್ಯಾಕ್ಟರಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ವಯೋಮಿತಿ 20 ರಿಂದ 35
ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರೋಡ್, ದಾವಣಗೆರೆ.
97422 66668

**WANTED**
Boys required for data entry/billing work at Food Mart Super Market.
Qualification: Any degree
Mob: 98864 63531

**ಬೇಕಾಗಿದ್ದಾರೆ**
ಚಿಟ್‌ಫಂಡ್‌ನಲ್ಲಿ ಅನುಭವವಿರುವವರು ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
92421 18010
98803 06062

**ಮಾರಾಟಕ್ಕೆ**
ಸೈಟು ಮತ್ತು ಮನೆಗಳು
✦ ವಿನೋಬ ನಗರ
✦ ಯಲ್ಲಮ್ಮ ನಗರ
✦ ಶಾಂತಿ ನಗರ
✦ ಶಂಕರ್‌ವಿಹಾರ್ ಬಡಾವಣೆ
ಸಂಪರ್ಕಿಸಿ : 89517 16682

**ಬೇಕಾಗಿದ್ದಾರೆ**
ಡಿಸ್ಕೌಂಟ್ ಹೆಲ್ತ್ ಕಾರ್ಡ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್
93410 46423

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಮನೆ ಲೀಸ್ ಅಥವಾ ಬಾಡಿಗೆಗೆ ಇದೆ**
#91/85/263, ಡಿಸಿಎಂ ಟೌನ್‌ಶಿಪ್ 6ನೇ ಮೇನ್, 4ನೇ ಕ್ರಾಸ್ ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಸ್ ಗೆ / ಬಾಡಿಗೆಗೆ ಇದೆ. ವಿಚಾರಿಸಿ:
ಫೋ. : 97401 11769

**ಮಳಿಗೆ ಲೀಜ್/ಬಾಡಿಗೆಗೆ**
15x30 N.R. Road, Hasabavi Circle
89041 29928

**ಬೇಕಾಗಿದ್ದಾರೆ**
ಕನ್ನಡಕ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ.
98861 10950
08192-230023

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಬೆಳ್ಳಿ-ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ :
70197 70195

**ಗ್ಲೋಬಲ್ ಹೆಲ್ಫ್‌ಲೈನ್ ನಿರುದ್ಯೋಗ ನಿವಾರಣಾ ಸಂಘ (ರಿ.)**
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ.
ಉದ್ಯೋಗ ಮಾಹಿತಿ ಕೇಂದ್ರ
81470 12999, 89512 72999

**ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಲಿಂಗಾಯತ ಮಹಿಳೆ ಅಡುಗೆ ಮತ್ತು ಮನೆ ಕೆಲಸಕ್ಕೆ ಬೇಕಾಗಿದ್ದಾರೆ.
99455 99998

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದಲ್ಲಿ ಬಸ್‌ಸ್ಟ್ಯಾಂಡ್ ನ ಹತ್ತಿರ ಭಾರತ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ SM ಲಾಡ್ಜ್‌ಗೆ ಹತ್ತಿರ ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ. ಸಂಪರ್ಕಿಸಿ:
98444 33504

**ಬೇಕಾಗಿದ್ದಾರೆ**
ಕೆಲಸ ಬೇಕಾ.com
Job consultancy
Be Educated & Be Professional
Any Degree, MSW, M.Sc, Diploma, B.E, M.A, ITI, B.Ed, PUC
97408 51555
97405 52555

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ಎಪಿಎಂಸಿ 'ಎ' ಬ್ಲಾಕ್ ನಲ್ಲಿ 45x100 ಅಳತೆಯ ಗೋಡೌನ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
ಮೊ.94481-14684

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ಜಾಗ ಮಾರಾಟಕ್ಕಿದೆ**
ಶಿವಮೊಗ್ಗ ನಗರದ K.S.R.T.C. ನಿಲ್ದಾಣದಿಂದ 3 ಕಿ.ಮೀ. ಹತ್ತಿರದಲ್ಲಿ ಶಾಲೆ, ಕಾಲೇಜ್, ಫ್ಯಾಕ್ಟರಿ, ನರ್ಸಿಂಗ್ ಹೋಂ, ಹೌಸಿಂಗ್ ಕಾಂಪ್ಲೆಕ್ಸ್‌ಗಳು ಇತರೆ ಅನುಕೂಲಕ್ಕೆ ಯೋಗ್ಯವಾದ 20 ಗುಂಟೆ ರೆವಿನ್ಯೂ ಜಾಗ ಮಾರಾಟಕ್ಕಿದೆ. ಗೋಪಶೆಟ್ಟಿಕೊಪ್ಪ, ಶಿವಮೊಗ್ಗ.
96204 48644, 97398 67923


**ಟೈರ್ ಶೋ ರೂಮ್‌ನಲ್ಲಿ**
wheel Alignment ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮಾತ್ರ
ಸಂಬಳ : 13,000/-
95381 87385,
08192-261003
99161 43003

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ದಿ ದಾವಣಗೆರೆ ಕ್ಲಬ್ (ರಿ.)**
**ಚುನಾವಣೆ : ಯುಜಿಎಸ್ ನೇತೃತ್ವದ ಗುಂಪನ್ನು ಬೆಂಬಲಿಸಿ ಕಣದಿಂದ ನಿವೃತ್ತಿ**

ಮಾನ್ಯ ಸದಸ್ಯ ಬಾಂಧವರೇ,

ದಿ ದಾವಣಗೆರೆ ಕ್ಲಬ್ (ರಿ.) ಇದರ ಆಡಳಿತ ಮಂಡಳಿಗೆ ದಿನಾಂಕ 31.01.2021ರ ಭಾನುವಾರ ನಡೆಯಲಿರುವ ಚುನಾವಣೆಗೆ 1) ಶ್ರೀ ಜಯ್ಯಪ್ಪ (ಉಪಾಧ್ಯಕ್ಷ ಸ್ಥಾನಕ್ಕೆ), 2) ಶ್ರೀ ಪ್ರಕಾಶ್ ವಿ. ರಾಯ್ಕರ್ (ನಿರ್ದೇಶಕರ ಸ್ಥಾನಕ್ಕೆ), 3) ಶ್ರೀ ಚನ್ನಬಸವನಗೌಡ ಎನ್.ಜಿ. (ನಿರ್ದೇಶಕರ ಸ್ಥಾನಕ್ಕೆ) 4) ಶ್ರೀ ಸೋಮಶೇಖರ್ ಎನ್. (ನಿರ್ದೇಶಕರ ಸ್ಥಾನಕ್ಕೆ) ಆದ ನಾವುಗಳು ಸ್ಪರ್ಧಿಸಿದ್ದು, ಶ್ರೀ ಯು.ಜಿ. ಶಿವಕುಮಾರ್ ಅವರ ನೇತೃತ್ವದ ಗುಂಪನ್ನು ಬೆಂಬಲಿಸಿ ಕಣದಿಂದ ಸ್ವಯಂ ನಿವೃತ್ತಿಗೊಂಡಿದ್ದೇವೆ. ನಮ್ಮೆಲ್ಲಾ ಆತ್ಮೀಯರೂ, ಕ್ಲಬ್‌ನ ಗೌರವಾನ್ವಿತ ಮಾನ್ಯ ಸದಸ್ಯರುಗಳು ಶ್ರೀಯುತ ಯು.ಜಿ. ಶಿವಕುಮಾರ್ ಬಣಕ್ಕೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡುವುದರ ಮೂಲಕ ಆ ಗುಂಪಿನ ಎಲ್ಲಾ 11 ಜನರನ್ನು ಜಯಶೀಲರನ್ನಾಗಿ ಮಾಡುವುದರ ಮೂಲಕ ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.


ಶ್ರೀ ಜಯ್ಯಪ್ಪ (ಉಪಾಧ್ಯಕ್ಷ ಸ್ಥಾನಕ್ಕೆ)

ಶ್ರೀ ಪ್ರಕಾಶ್ ವಿ. ರಾಯ್ಕರ್ (ನಿರ್ದೇಶಕರ ಸ್ಥಾನಕ್ಕೆ)

ಶ್ರೀ ಚನ್ನಬಸವನಗೌಡ ಎನ್.ಜಿ. (ನಿರ್ದೇಶಕರ ಸ್ಥಾನಕ್ಕೆ)

ಶ್ರೀ ಸೋಮಶೇಖರ್ ಎನ್. (ನಿರ್ದೇಶಕರ ಸ್ಥಾನಕ್ಕೆ)

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**ಶ್ರೀ ನಿಧಿ ಎಜುಕೇಷನಲ್ ಟ್ರಸ್ಟ್- ದಾವಣಗೆರೆ.**
ಪ್ರಿನ್ಸ್ ದೂರ ಶಿಕ್ಷಣ ಕಾಲೇಜ್
(Distance Education) (UGC, DEB, & AICTE Approved university)
SSLC, PUC, B.A, B.Com, B.Sc, B.C.A, M.A, M.Com, M.Sc, M.S.W, MBA, MCA, Diploma, B.E, LLB, LLM, Ph.D & all Coursses
97408 51555, 97405 52555

**ನಿಮ್ಮ ಗಮನಕ್ಕೆ**
ನಿಮ್ಮ ದೇಹದ ತೂಕ ಕಡಿಮೆ/ ಹೆಚ್ಚಿಸಿಕೊಳ್ಳಿ
(ಉಚಿತ ತಪಾಸಣೆ ಇರುತ್ತದೆ)
ಇಂದೇ ಕರೆ ಮಾಡಿ
90970 70333

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**SSLC/PUC CORRESPONDENCE**
ಸುವರ್ಣ ಅವಕಾಶ
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 86601 95955

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
2-3 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಆಸಕ್ತರು ವಿಚಾರಿಸಿ
(ಸಂಪರ್ಕಿಸುವ ಸಮಯ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ)
99865 38099

**ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕ್ಕೆ ಬೇಕಾಗಿದೆ.**
ಆಂಜನೇಯ ಬಡಾವಣೆಯಲ್ಲಿ ಸೈಟ್ ಬೇಕಾಗಿದೆ, ಯರಗುಂಟೆಯಲ್ಲಿ ಸೈಟುಗಳು ಮಾರಾಟಕ್ಕಿವೆ.
86181 82332

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸ್ವಯಂ ಪ್ರೇರಣ ವೈಜ್ಞಾನಿಕ-ವಾಸ್ತು**
'ನಿಮ್ಮ ಪ್ರಗತಿಪರ ಜೀವನಕ್ಕಾಗಿ ನಮ್ಮ ಪ್ರಯತ್ನ' ಅಸ್ಟ್ರೋ -ವಾಸ್ತು ಪರಿಹಾರ : ನಿಮ್ಮ ಎಲ್ಲಾ ತರಹದ ಸಮಸ್ಯೆಗಳಿಗೆ ಆರೋಗ್ಯ, ಹಣಕಾಸು, ಶಿಕ್ಷಣ, ಸಂಬಂಧ, ನೌಕರಿ, ಉದ್ಯೋಗ, ವಿವಾಹ, ಕೋರ್ಟ್ ವ್ಯಾಜ್ಯಗಳು ಮುಂತಾದವು.
8618035192, 8762089930

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**Required**
Works Manager:- Qualification: Diploma Automobile/ Mechnical Experience : 3-4 Years in Automobile Workshop
Mechanic :- Qualification: ITI Diesel Mechanic / Fitter
Helper :- Qualification: ITI/SSLC
Vijay Auto Sales & Service
Dealer for Eicher Trucks & Buses
P.B. Road, Davanagere
Mob : 94480 70098

# ಕುಂದುವಾಡ ಕೆರೆ ಅಭಿವೃದ್ಧಿಗೆ ವಿರೋಧವಿಲ್ಲ: ಭ್ರಷ್ಟಾಚಾರಕ್ಕೆ ವಿರೋಧ

ದಾವಣಗೆರೆ, ಜ. 27 - ಕುಂದುವಾಡ ಕೆರೆ ಅಭಿವೃದ್ಧಿ ಪಡಿಸಲು ನಮ್ಮ ವಿರೋಧವಿಲ್ಲ. ಆದರೆ ಅನಗತ್ಯ ಕಾಮಗಾರಿ ನಡೆಸುವ ಮೂಲಕ 15 ಕೋಟಿ ರೂ. ಖರ್ಚು ಮಾಡಿ ನಡೆಸುವ ಭ್ರಷ್ಟಾಚಾರಕ್ಕೆ ನಮ್ಮ ವಿರೋಧವಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲ ದಿನಗಳಿಂದ ಅಧಿಕಾರಿಗಳೊಂದಿಗೆ ಕೆರೆ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕುಂದುವಾಡ ಕೆರೆಯನ್ನು ಕೇವಲ 7 ಕೋಟಿ ರೂ.ಗಳಲ್ಲಿ ಅಭಿವೃದ್ಧಿ ಮಾಡುತ್ತೇವೆ. 15 ಕೋಟಿ ರೂ.ಗಳಲ್ಲಿ ಜಿಲ್ಲೆಯ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಮಾಡುವುದಾಗಿ ಸವಾಲು ಹಾಕಿರುವುದಾಗಿ ಹೇಳಿದರು.

ಕೆರೆ ಸಂರಕ್ಷಣಾ ಅಭಿವೃದ್ಧಿ ಪ್ರಾಧಿಕಾರಿ ಜಿಲ್ಲಾಧಿಕಾರಿಗಳಿಗೆ ನೋಟಿಸ್ ನೀಡಿದೆ. ಜಿಲ್ಲಾಧಿಕಾರಿಗಳು ಸಭೆ ನಡೆಯುತ್ತಿದ್ದರೆ ಅತ್ತ ಕಾಮಗಾರಿಯೂ ನಡೆದಿದೆ.

ಕೆರೆ ಕಾಮಗಾರಿಗಳ ಪೈಕಿ ಕೆರೆಯ ಏರಿ, ಆವರಣದಲ್ಲಿ ಬೆಳೆದಿರುವ ಪೊದೆ ಹಾಗೂ ಮುಳ್ಳನ್ನು ಪಾಲಿಕೆ ನೌಕರರಿಂದಲೇ ತೆರವುಗೊಳಿಸಬಹುದು. ಕೆರೆ ಏರಿ ವಿಸ್ತರಣೆಗೆ ಜಾಗವೇ ಇಲ್ಲ. ಆದರೆ ವಿಸ್ತರಣೆಗೆ ಹಣ ವೆಚ್ಚ ಮಾಡಲಾಗುತ್ತಿದೆ. ವಿದ್ಯುತ್ ಕಂಬ ಹಾಗೂ ದೀಪದ ವ್ಯವಸ್ಥೆಯನ್ನು ವಿದ್ಯುತ್ ಇಲಾಖೆ ಕಲ್ಪಿಸುತ್ತದೆ. ಆದರೆ ಅಭಿವೃದ್ಧಿ ನೆಪದಲ್ಲಿ ಅನಗತ್ಯ ವೆಚ್ಚ ಮಾಡಲಾಗುತ್ತಿದೆ. ಒಟ್ಟಿನಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ ಎಂದು ಆರೋಪಿಸಿದರು.

ಇತ್ತೀಚೆಗೆ ಉಸ್ತುವಾರಿ ಸಚಿವರ ಮುಂದೆ ಗುತ್ತಿಗೆದಾರರು ನಮ್ಮನ್ನು ಭೇಟಿ ಮಾಡಿಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಜಿಲ್ಲಾಧಿಕಾರಿಗಳು ದೂರಿದ್ದಾರೆ. ಗುತ್ತಿಗೆದಾರರೂ ಏಕೆ ಇವರನ್ನು ಭೇಟಿ ಮಾಡಬೇಕು? ಇದರ ಹಿಂದಿನ ಅರ್ಥವೇನು? ಎಂದು ದಿನೇಶ್ ಶೆಟ್ಟಿ ಪ್ರಶ್ನಿಸಿದರು.

ಈಗಾಗಲೇ 8 ರಿಂದ 10 ದಿನಗಳಿಗೊಮ್ಮೆ ನೀರು ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೀರಿನ ಅಭಾವ ತಲೆ ದೋರಲಿದೆ. ಇನ್ನೂ ಕೊರೊನಾ ಸಂಕಷ್ಟದಲ್ಲೂ ಆಸ್ತಿ ತೆರಿಗೆ ಹೆಚ್ಚಿಸಲಾಗಿದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ ಜಾಧವ್, ಅಯೂಬ್ ಪೈಲ್ವಾನ್, ಸುರಭಿ ಶಿವಮೂರ್ತಿ, ಶ್ರೀಕಾಂತ್ ಬಗೇರ, ಯುವರಾಜ್, ರವಿ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಗ್ರಾಮದ ಒಳಿತಿಗಾಗಿ ಗ್ರಾ.ಪಂ. ಸದಸ್ಯರು ಒಂದಾಗುವಂತೆ ರಾಜನಹಳ್ಳಿ ಸ್ವಾಮೀಜಿ ಕಿವಿಮಾತು



ಮಲೇಬೆನ್ನೂರು, ಜ.27- ಗ್ರಾ.ಪಂ. ನೂತನ ಸದಸ್ಯರು ಗ್ರಾಮದ ಹಿತದೃಷ್ಟಿಯಿಂದ ಪಕ್ಷಾತೀತ, ಜಾತ್ಯತೀತವಾಗಿ ಒಗ್ಗಟ್ಟಿನಿಂದ ಇರಬೇಕೆಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಕಿವಿಮಾತು ಹೇಳಿದರು.

ಬುಧವಾರ ರಾಜನಹಳ್ಳಿ ಗ್ರಾ.ಪಂ.ನ ನೂತನ ಸರ್ವ ಸದಸ್ಯರು ವಾಲ್ಮೀಕಿ ಗುರುಪೀಠಕ್ಕೆ ಆಗಮಿಸಿ ಶ್ರೀಗಳ ಆಶೀರ್ವಾದ ಪಡೆದುಕೊಂಡ ಸಂದರ್ಭ ದಲ್ಲಿ ಅವರನ್ನು ಸನ್ಮಾನಿಸಿ ಮಾತನಾಡಿದರು.

ಗ್ರಾಮಗಳಲ್ಲಿ ಗ್ರಾ.ಪಂ. ಚುನಾವಣೆಗಳನ್ನು ಮಾಡದಂತೆ ಅವಿರೋಧವಾಗಿ ಆಯ್ಕೆ ಮಾಡಿ ಕೊಂಡರೆ ಬಹಳ ಒಳ್ಳೆಯದು. ಆದರೆ ಗ್ರಾಮ ದಲ್ಲಿ ನಿಮ್ಮ ನಿಮ್ಮ ನಡುವಿನ ವೈಮನಸ್ಸುಗಳಿಂದಾಗಿ ಜಿದ್ದಾಜಿದ್ದಿನ ಚುನಾವಣೆ ಮಾಡಿ ಗೆಲ್ಲುತ್ತೀರಿ. ಗೆದ್ದ ನಂತರ ಆ ಜಿದ್ದನ್ನು ಬಿಟ್ಟು ಎಲ್ಲರೂ ಒಂದಾಗಿದ್ದರೆ ಮಾತ್ರ ಗ್ರಾಮದಲ್ಲಿ ಶಾಂತಿ, ಸಾಮರಸ್ಯ, ಅಭಿವೃದ್ಧಿ ಕಾಣಲು ಸಾಧ್ಯ ಎಂದರು.

ಬರುವ ಫೆಬ್ರವರಿ 8 ಮತ್ತು 9 ರಂದು ಮಠದಲ್ಲಿ 3ನೇ ವರ್ಷದ ವಾಲ್ಮೀಕಿ ಜಾತ್ರೆ ಹಮ್ಮಿಕೊಂಡಿದ್ದು, ಈ ಬಾರಿ ವಿಶೇಷವಾಗಿ ರಾಷ್ಟ್ರಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಈ ವೇಳೆ ಹಾಜರಿದ್ದ ಜಿ.ಪಂ ಮಾಜಿ ಅಧ್ಯಕ್ಷ ವೈ. ರಾಮಪ್ಪ, ಜಿ.ಪಂ. ಮಾಜಿ ಸದಸ್ಯರೂ, ವಕೀಲರೂ ಆದ ಎಂ. ನಾಗೇಂದ್ರಪ್ಪ ವಾಲ್ಮೀಕಿ ಜಾತ್ರಾ ಸಮಿತಿ ಸಂಚಾಲಕರೂ, ಜೆಡಿಎಸ್ ಎಸ್ಟಿ ಘಟಕದ ರಾಜ್ಯಾಧ್ಯಕ್ಷರೂ ಆದ ಹೊದಿಗೆರೆ ರಮೇಶ್ ಮಾತನಾಡಿದರು.

ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷ ಸ್ಥಾನ ಎಸ್ಟಿಗೆ ಮೀಸಲಾಗಿದ್ದು, ಎಸ್ಟಿಗೆ ಸೇರಿದ ಸದಸ್ಯರು ಚೈತ್ರ ಲಂಕೇಶ್ ಅವರು ಒಬ್ಬರೇ ಇರುವುದರಿಂದ ಅವರು ಅವಿರೋಧವಾಗಿ ಆಯ್ಕೆಯಾಗುವುದು ಖಚಿತ ಎಂದು ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯ ಎ.ಕೆ. ನಾಗೇಂದ್ರಪ್ಪ ಹೇಳಿದರು.

ಗ್ರಾಮದ ಮುಖಂಡರಾದ ಆರ್.ಟಿ. ಧನಂಜಯಪ್ಪ, ಜಿಲ್ಲಾ ಸಹಕಾರಿ ಯೂನಿಯನ್ ಮಾಜಿ ನಿರ್ದೇಶಕ ವೈ. ಚಂದ್ರಶೇಖರ್, ಬಿ. ಭೀಮಪ್ಪ, ಎಲ್. ಹನುಮಂತಪ್ಪ, ಗ್ರಾ.ಪಂ ಸದಸ್ಯರಾದ ಪರಶುರಾಮಪ್ಪ, ಯಲ್ಲಪ್ಪ, ಜಯಪ್ಪ, ಹೇಮಾವತಿ, ಮಾರುತಿ, ಶಕುಂತಲಮ್ಮ, ಗೀತಾ ಚಂದ್ರಶೇಖರ್, ಗೀತಾ ಅಶೋಕ್ ಸೇರಿದಂತೆ ಬಹುತೇಕ ಸದಸ್ಯರು ಹಾಜರಿದ್ದರು.

# ಅಪಘಾತದಲ್ಲಿ ಮಡಿದ ಮಹಿಳೆಯರಿಗೆ ದಾ- ಹ ಅರ್ಬನ್ ಬ್ಯಾಂಕಿನಲ್ಲಿ ಶ್ರದ್ಧಾಂಜಲಿ



ದಾವಣಗೆರೆ,ಜ.27- ಧಾರವಾಡದ ಬಳಿ ಕಳೆದ ವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಡಿದ ನಗರದ ಎಲ್ಲಾ 10 ಜನ ಮಹಿಳೆಯರಿಗೆ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಬ್ಯಾಂಕಿನ ಸಭಾಂಗಣದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎ. ಮುರುಗೇಶ್ ಅವರ ಅಧ್ಯಕ್ಷತೆಯಲ್ಲಿ ಇಂದು ಏರ್ಪಾಡಾಗಿದ್ದ ಬ್ಯಾಂಕಿನ ಮಾಸಿಕ ಸಭೆಯ ಆರಂಭದಲ್ಲಿ ಮೇಣದ ಬತ್ತಿ ಬೆಳಗಿಸುವುದರ ಮೂಲಕ ಮೃತರ ಆತ್ಮಕ್ಕೆ ಚಿರಶಾಂತಿ ನೀಡುವಂತೆ ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ರಸ್ತೆ ಅಪಘಾತದಲ್ಲಿ ಮಡಿದ 10 ಜನ ಮಹಿಳೆಯರಲ್ಲಿ ಶ್ರೀಮತಿ ಮಾನಸಿ (ಹೇಮಲತಾ) ಮತ್ತು ಅವರ ಪುತ್ರಿ ಕು. ಯಶ್ಮಿತಾ ಅವರುಗಳೂ ಸೇರಿದ್ದು, ಮಾನಸಿ ಅವರು ತಮ್ಮ ಬ್ಯಾಂಕಿನ ಸದಸ್ಯರಾಗಿದ್ದರು. ಅವರಿಗೆ ಬ್ಯಾಂಕಿನ ಸದಸ್ಯರ ಮರಣೋತ್ತರ ಪರಿಹಾರ ನಿಧಿಯಿಂದ 10 ಸಾವಿರ ರೂ.ಗಳ ಚೆಕ್ಕನ್ನು ಅವರ ಕುಟುಂಬ ವರ್ಗಕ್ಕೆ ನೀಡಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮುರುಗೇಶ್ ತಿಳಿಸಿದರು.

ಅಲ್ಲದೇ, ಬ್ಯಾಂಕಿನ ಎಲ್ಲಾ ಸದಸ್ಯರಿಗೂ ಅಪಘಾತ ವಿಮೆ ಮಾಡಿಸಲಾಗಿದ್ದು, ಇದರನ್ವಯ ಮಾನಸಿ ಅವರಿಗೆ ವಿಮಾ ಕಂಪನಿಯಿಂದ 1 ಲಕ್ಷ ರೂ. ಪರಿಹಾರ ಕೊಡಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಮುರುಗೇಶ್ ಅವರು ವಿವರಿಸಿದರು.

> "ಸಾವಿಗೀಡಾದವರಲ್ಲಿ ಬ್ಯಾಂಕಿನ ಸದಸ್ಯರಾಗಿದ್ದ ಹೇಮಲತಾ ಅವರಿಗೆ ಪರಿಹಾರ.
>
> -ಎನ್.ಎ. ಮುರುಗೇಶ್, ಅಧ್ಯಕ್ಷರು
> ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್

ಬ್ಯಾಂಕಿನ ಉಪಾಧ್ಯಕ್ಷ ಕಿರುವಾಡಿ ವಿ. ಸೋಮಶೇಖರ್, ನಿರ್ದೇಶಕರುಗಳಾದ ರಮಣ್ ಲಾಲ್ ಪಿ. ಸಂಘವಿ, ಎಸ್.ಕೆ. ವೀರಣ್ಣ, ಎ.ಹೆಚ್. ಕುಬೇರಪ್ಪ, ಕೃಷ್ಣಸಾ ಭೂತೆ, ಶಂಕರ್ ಖಟಾವ್ ಕರ್, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಎಸ್.ಕೆ. ಪ್ರಭುಪ್ರಸಾದ್, ಶ್ರೀಮತಿ ಪಿ.ಎಂ. ಶಶಿಕಲಾ ರುದ್ರಯ್ಯ, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ.ನಾಗೇಂದ್ರಚಾರಿ, ಕೆ.ಹೆಚ್. ಶಿವಯೋಗಪ್ಪ, ಶ್ರೀಮತಿ ಅನಿಲಾ ಇಂಧೂದರ್ ನಿಶಾನಿಮಠ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗಸ್ವಾಮಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

## ಕೆಂಪು ಕೋಟೆಯಲ್ಲಿ ಸಿಖ್ ಧ್ವಜ ಹಾರಿಸಿದವ ಅಮಾಯಕ ಎಂದ ಕುಟುಂಬ

ಅಮೃತ್‌ಸರ್, ಜ. 27 - ಕೆಂಪು ಕೋಟೆಯ ಮೇಲೆ ಸಿಖ್ ಧ್ವಜ ಹಾರಿಸಿದ ಜುಗರಾಜ್ ಸಿಂಗ್‌ನನ್ನು ಸಮರ್ಥಿಸಿಕೊಂಡಿರುವ ಕುಟುಂಬದವರು, ಆತನು ಅಮಾಯಕ. ಜೊತೆಯಲ್ಲಿದ್ದವರು ಹೇಳಿದ ಕಾರಣಕ್ಕೆ ಧ್ವಜ ಹಾರಿಸಿದ್ದಾನೆ ಅಷ್ಟೇ ಎಂದಿದ್ದಾರೆ.

ನನ್ನ ಮೊಮ್ಮಗ ರೈತರ ಜೊತೆ ಪ್ರತಿಭಟನೆಗಾಗಿ ದೆಹಲಿಗೆ ತೆರಳಿದ್ದ. ಸಿಖ್ ಧ್ವಜವನ್ನು ಕೆಂಪು ಕೋಟೆಯ ಮೇಲೆ ಹಾರಿಸುವ ಉದ್ದೇಶ ಅವನಿಗೆ ಇರಲಿಲ್ಲ ಎಂದು ಮೆಹಲ್ ಸಿಂಗ್ ತಿಳಿಸಿದ್ದಾರೆ.

ಜೊತೆಯಲ್ಲಿದ್ದವರಿಗೆ ಕಂಬ ಹತ್ತಲು ಬರುವುದಿಲ್ಲ. ಹೀಗಾಗಿ ಜುಗರಾಜ್ ಕಂಬ ಹತ್ತಿ ಧ್ವಜ ಹಾರಿಸುವಂತೆ ಹೇಳಿದರು. ನನ್ನ ಮೊಮ್ಮಗ ಅಮಾಯಕ ಎಂದು ಸಿಂಗ್ ಹೇಳಿದ್ದಾರೆ.

ಮೊಮ್ಮಗನನ್ನು ಹಿಡಿಯಲು ಪೊಲೀಸರು ಮನೆ ಮೇಲೆ ದಾಳಿ ನಡೆಸಬಹುದು ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

## ನೋಟಿಸ್ ಕೊಡಬೇಡಿ, ಸಮಸ್ಯೆಗಳಿಗೆ ಸ್ಪಂದಿಸಿ

**(1ನೇ ಪುಟದಿಂದ)** ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಕಾರ್ಮಿಕರ ವಿಷಯಕ್ಕೆ ಸಂಬಂಧಿಸಿ ದಂತೆ ಕೈಗಾರಿಕೆಯೊಂದಿಗೆ ನೋಟಿಸ್ ಕೊಟ್ಟ ಪ್ರಕರಣ ಸಭೆಯ ಗಮನಕ್ಕೆ ತರಲಾಯಿತು.ಆಗ ಮಾತನಾ ಡಿದ ಶೆಟ್ಟರ್, ನೋಟಿಸ್ ಕೊಡುವ ಬದಲು ಸಮಸ್ಯೆ ಬಗೆಹರಿಸಿ. ಕೈಗಾರಿಕೆಗಳು ಈಗಾ ಗಲೇ ಬಳಲಿವೆ. ಕೈಗಾರಿಕೆಗಳು ಮುಚ್ಚಿದರೆ ಜನರು ಉದ್ಯೋಗ ಕಳೆದುಕೊಳ್ಳುತ್ತಾರೆ ಎಂದು ಎಚ್ಚರಿಸಿದರು.

## ಬಾಗಿಲು ಮುಚ್ಚಿಲ್ಲ : ಕೇಂದ್ರ

**(1ನೇ ಪುಟದಿಂದ)** ನಡೆದ ಸಂಪುಟ ಸಭೆಯಲ್ಲಿ ದೆಹಲಿ ಹಿಂಸಾಚಾರದ ಘಟನೆಗಳ ಕುರಿತು ಚರ್ಚಿಸಿಲ್ಲ ಎಂದವರು ಇನ್ನೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ರೈತರ ನಡುವೆ 11 ಸುತ್ತಿನ ಮಾತುಕತೆಗಳು ನಡೆದಿವೆ. ಹತ್ತು ಸುತ್ತಿನ ಮಾತುಕತೆ ಸಂದರ್ಭದಲ್ಲೂ ಮುಂದಿನ ಮಾತುಕತೆಯ ದಿನಾಂಕ ನಿರ್ಧರಿಸಲಾಗಿತ್ತು. ಆದರೆ, ಕೊನೆಯ ಮಾತುಕತೆ ವೇಳೆ ಮುಂದಿನ ದಿನಾಂಕ ನಿರ್ಧರಿಸಿಲ್ಲ.

## ಗಡಿ ದಾಟಿದ ಪೆಟ್ರೋಲ್

**(1ನೇ ಪುಟದಿಂದ)** ದರ 101.15 ರೂ. ಆಗಿದೆ. ಮಂಗಳವಾರದಂದು ಪೆಟ್ರೋಲ್ ಹಾಗೂ ಡೀಸೆಲ್‌ಗಳ ಬೆಲೆಯನ್ನು 35 ಪೈಸೆಯಷ್ಟು ಹೆಚ್ಚಿಸಲಾಗಿತ್ತು.

## ಇಂದು ವಿದ್ಯುತ್ ವ್ಯತ್ಯಯ


ದಾವಣಗೆರೆಯ ಜೈನ್ ಕಾಲೇಜ್ ಸುತ್ತಮುತ್ತಲಿನ ಪ್ರದೇಶ ಮತ್ತು ಆಂಜನೇಯ ಕಾಟನ್ ಮಿಲ್ ಸುತ್ತಮುತ್ತಲಿನ ಪ್ರದೇಶಗಳು ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ದಿನಕ್ಕೊಂದು ಚುಟುಕು**

ಬಾಳಲಿ ಬೆರೆತರೆ ಸಂಸ್ಕಾರ
ಕಂಪಲಿ ಅರಳುವ ವಿಚಾರ
ನಡೆ- ನುಡಿಯಲ್ಲಿದ್ದರೆ ಸದಾಚಾರ
ಮಿಂಚಲಿ ಬಾಳದು ಪ್ರಖರ.!

- ವೀಕೆಎಂ

## ಗಣೇಶ್ ಪೂಜಾರಯ್ಯ ಅವರಿಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಜ. 27- ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಪ್ರಧಾನ ಅರ್ಚಕ ಪೂಜಾರ್ ಯಲ್ಲಪ್ಪ ಹಾಗು ಬಸಮ್ಮ ಅವರ ತೃತೀಯ ಪುತ್ರ ಗಣೇಶ್ ಪೂಜಾರಯ್ಯ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿ.ಹೆಚ್.ಡಿ.ಪದವಿ ನೀಡಿದೆ.


ಸಹ ಪ್ರಾಧ್ಯಾಪಕರಾದ ಡಾ. ಡಿ. ನಾಗರಾಜ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಸ್ಟಡೀಸ್ ಆನ್ ದಿ ಸಿಂಥೆಸಿಸ್, ಕ್ಯಾರಕ್ಟರೈಜೇಷನ್ ಅಂಡ್ ಬಯೋಲಾಜಿಕಲ್ ಎವುಲ್ಯೂಷನ್ ಆಫ್ ಪೈರಾಝೋಲ್ಸ್ ಅಂಡ್ ಪಿರಾಝೋಲೋ-ಪಿರಿಮಿಡಿನ್ ಡೆರುವೇಟಿವ್ಸ್' ಎಂಬ ಮಹಾ ಪ್ರಬಂಧಕ್ಕೆ ಪಿಹೆಚ್‌ಡಿ ದೊರೆತಿದೆ. ಪ್ರಾಧ್ಯಾಪಕ ಡಾ. ಯು. ಚಂದ್ರಶೇಖರ್ ಅವರು ಸಹ-ಮಾರ್ಗದರ್ಶಕರಾಗಿದ್ದರು.

ಗಣೇಶ್, ವೈದ್ಯಕೀಯ ರಸಾಯನ ವಿಜ್ಞಾನದಲ್ಲಿ ಕೆಲವು ಪ್ರಾಜೆಕ್ಟ್‌ಗಳಲ್ಲಿ ಸಂಶೋಧನಾರ್ಥಿಯಾಗಿದ್ದು, ಅವರ ಸಂಶೋಧನೆಗೆ 2020 ರಲ್ಲಿ 'ರಿಸರ್ಚ್ ಎಕ್ಸೆಲೆನ್ಸ್ ಅವಾರ್ಡ್' ಲಭಿಸಿದೆ. ಕೆಲಸ ನಿರ್ವಹಿಸುತ್ತಿದ್ದಾರೆ.



# ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

**ದಿನಾಂಕ 31.01.2021ನೇ ಭಾನುವಾರ ನಡೆಯಲಿರುವ 2020-21 ರಿಂದ 2022-23 ನೇ ಸಾಲಿಗೆ (3 ವರ್ಷ ಅವಧಿಗೆ) ಮಾನ್ಯ ಶ್ರೀ ಯು.ಜಿ. ಶಿವಕುಮಾರ್ ಇವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿ ಮತ್ತು ಚಿಹ್ನೆಗಳ ವಿವರ**


ಅಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | ಶಿವಕುಮಾರ ಯು.ಜಿ. |  | |


ಉಪಾಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | | | |
| 3 | ವೀರಣ್ಣ ಐ.ವಿ. (ಐನಳ್ಳಿ) |  | |


ಗೌರವ ಕಾರ್ಯದರ್ಶಿ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ರವಿಶಂಕರ್ ಪಲ್ಲಾಗಟ್ಟೆ |  | |
| 2 | | | |

ಗೌರವ ಸಹ-ಕಾರ್ಯದರ್ಶಿ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | ನಾಗರಾಜ್ ಕೆ.ಬಿ. |  | |

ಕೋಶಾಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಪುಟ್ಟಪ್ಪ ಕಾಶಿಪುರ |  | |
| 2 | | | |

ನಿರ್ದೇಶಕರುಗಳ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಅಭಿಷೇಕ್ ಬಿ.ಜೆ. (ಬೇತೂರು) |  | |
| 2 | | | |
| 3 | | | |
| 4 | | | |
| 5 | ತಿಮ್ಮರಾಜ ಗುಪ್ತಾ ಎಸ್.ಕೆ. |  | |
| 6 | ನಾಗರಾಜ ಬಿ.ಜಿ. (ಬಸವಾಪಟ್ಟಣ) |  | |
| 7 | | | |
| 8 | | | |
| 9 | ಪಟೇಲ್ ಬಿ.ಪಿ. (ಕಾರಿಗನೂರು ಬಸವೇಶ) |  | |
| 10 | ಬೆಳ್ಳೂಡಿ ಸದಾನಂದ |  | |
| 11 | ಮಲ್ಲಿಕಾರ್ಜುನ ಬಾದಾಮಿ |  | |
| 12 | | | |
| 13 | | | |
| 14 | | | |
| 15 | | | |

ಕಬ್ಲ್‌ನ ಸರ್ವತೋಮುಖ ಅಭಿವೃದ್ಧಿ ಹಾಗೂ ನಿಮ್ಮ ಸ್ಪಂದನೆಗೆ ಶ್ರಮಿಸಲಿ ನಮ್ಮ ಗುಂಪಿನ 11 ಜನ ಅಭ್ಯರ್ಥಿಗಳಿಗೂ ಮತ ಚಲಾಯಿಸುವುದರ ಮೂಲಕ ಆಶೀರ್ವದಿಸಿ ಜಯಶೀಲರನ್ನಾಗಿ ಮಾಡಲು ವಿನಮ್ರ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.

ಮತದಾನ ಸಮಯ : ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ
ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ವಿ.ಸೂ. : ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು, ಮತ ಚಲಾಯಿಸಿ.

**ಬನ್ನಿ... ಕೈ ಜೋಡಿಸಿ**

*ನಿಮ್ಮ ಮತ, ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆಗೆ ಹಿತ*


# ಕನ್ನಡ ಜಾಗೃತಿ ಸಮಿತಿಯಿಂದ 'ಶುದ್ಧ ಕನ್ನಡ ನಾಮಫಲಕ ಅಭಿಯಾನ'



ದಾವಣಗೆರೆ, ಜ.27- ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಹಮ್ಮಿಕೊಂಡಿರುವ 'ಕನ್ನಡ ಕಾಯಕ ವರ್ಷ' ಕಾರ್ಯಕ್ರಮದಡಿ 'ಶುದ್ಧ ಕನ್ನಡ ನಾಮಫಲಕ ಅಭಿಯಾನ'ವನ್ನು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಹಾಗೂ ಮಹಾನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ಜಂಟಿ ಆಶ್ರಯದಲ್ಲಿ ಇಂದು ನಗರದಲ್ಲಿ ನಡೆಸಲಾಯಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿ/ಸಂಸ್ಥೆಗಳು, ಅಂಗಡಿ, ವಾಣಿಜ್ಯ ಸಂಸ್ಥೆಗಳು ಹಾಗೂ ಮಾಲ್‌ಗಳಿಗೆ ತೆರಳಿ ಸ್ಥಳೀಯ ಭಾಷೆಯಾದ ಕನ್ನಡವನ್ನು ನಾಮಫಲಕ ಹಾಗೂ ಆಡಳಿತದಲ್ಲಿ ಪ್ರಧಾನವಾಗಿ ಬಳಸುವಂತೆ ಸಮಿತಿಯವರು ಹಕ್ಕೊತ್ತಾಯ ಸಲ್ಲಿಸಿದರಲ್ಲದೆ, ಘೋಷವಾಕ್ಯದ ಫಲಕಗಳನ್ನು ಪ್ರದರ್ಶಿಸಿದರು.

ಪ್ರಧಾನ ಅಂಚೆ ಕಚೇರಿಗೆ ತೆರಳಿ ಅಲ್ಲಿನ ಪ್ರಭಾರ ಮುಖ್ಯ ಅಂಚೆ ಅಧೀಕ್ಷಕರಾದ ನಂದಾ ಮತ್ತು ತಹಶೀಲ್ದಾರ್ ಕೇಶವ್ ಅವರುಗಳಿಗೆ ಹಕ್ಕೊತ್ತಾಯ ಸಲ್ಲಿಸಲಾಯಿತು. ರೈಲ್ವೇ ನಿಲ್ದಾಣದ ನಿಲ್ದಾಣ ಅಧೀಕ್ಷಕ ಶ್ರೀಧರ್ ಅವರಿಗೆ ಹಕ್ಕೊತ್ತಾಯವನ್ನು ನೀಡಿ ರೈಲ್ವೇ ಟಿಕೇಟ್, ಅರ್ಜಿ ಹಾಗೂ ಆಡಳಿತದಲ್ಲಿ ಕನ್ನಡ ಭಾಷಾ ಬಳಕೆಗೆ ಮನವಿ ಮಾಡಲಾಯಿತು.

**ಇಬ್ಬರು ಮಾತ್ರ ಕನ್ನಡಿಗರು :** ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದಲ್ಲಿ ಕೇವಲ ಇಬ್ಬರು ಅಧಿಕಾರಿಗಳು ಹಾಗೂ ಇಬ್ಬರು 'ಡಿ' ದರ್ಜೆ ನೌಕರರು ಕನ್ನಡಿಗರಿದ್ದಾರೆ. ಉಳಿದವರೆಲ್ಲರೂ ಅನ್ಯ ಭಾಷಿಕರು ಎಂಬುದು ಕನ್ನಡಿಗರ ಪ್ರಸ್ತುತ ಪಾಡಿಗೆ ಸಾಕ್ಷಿಯಾಗಿದೆ. ಈ ಹಿಂದೆ ರೈಲ್ವೇ ಟಿಕೇಟ್‌ನಲ್ಲಿ ಹಿಂದಿ, ಇಂಗ್ಲೀಷ್ ಹಾಗೂ ಕನ್ನಡ ಭಾಷೆಯನ್ನು ಸಹ ಬಳಸಲಾಗುತ್ತಿತ್ತು. ಆದರೆ ಲಾಲೂ ಪ್ರಸಾದ್ ಯಾದವ್ ರೈಲ್ವೇ ಮಂತ್ರಿಯಾಗಿದ್ದ ಅವಧಿಯಲ್ಲಿ ಕನ್ನಡ ಭಾಷೆಗೆ ಗೇಟ್‌ಪಾಸ್ ನೀಡಿದ್ದು, ಇದುವರೆವಿಗೂ ಸೇರ್ಪಡೆಯಾಗದಿರುವ ಬಗ್ಗೆ ಜಾಗೃತಿ ಸಮಿತಿ ಸದಸ್ಯರು ಕಿಡಿ ಕಾರಿದ್ದಾರೆ.

ಜಾಗೃತಿ ಸಮಿತಿ ಸದಸ್ಯರಾದ ಬಂಕಾಪುರದ ಚನ್ನಬಸಪ್ಪ, ಎನ್.ಟಿ. ಯರ್ರಿಸ್ವಾಮಿ, ಪ್ರೊ. ಹೆಚ್.ಎ. ಭಿಕ್ಷಾವರ್ತಿ ಮಠ, ಬಾ.ಮ. ಬಸವರಾಜಯ್ಯ, ಎ. ಮಹಲಿಂಗಪ್ಪ, ಬಿ. ದಿಳ್ಳೆಪ್ಪ, ಎಸ್.ಎಸ್. ಸಿದ್ಧರಾಜು, ದೇವಿಕ ಸುನೀಲ್, ಹೆಚ್.ಕೆ. ಸತ್ಯಭಾಮ ಅವರುಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

## 'ಟಿಕ್ ಟಾಕ್' ಮಾಲೀಕನ ವಹಿವಾಟು ಬಂದ್

ನವದೆಹಲಿ, ಜ. 27 – ಟಿಕ್ ಟಾಕ್ ವಿಡಿಯೋದ ಮಾಲೀಕನಾಗಿ ರುವ ಚೀನಾದ ಬೈಟ್‌ಡ್ಯಾನ್ಸ್ ಭಾರತ ದಲ್ಲಿರುವ ತನ್ನ ವಹಿವಾಟನ್ನು ಬಂದ್ ಮಾಡಲಿದೆ. ಕಂಪನಿಯು 2 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದೆ. ಟಿಕ್‌ಟಾಕ್ ವಿಡಿಯೋ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ.

ಈ ಬಗ್ಗೆ ಉದ್ಯೋಗಿಗಳಿಗೆ ಜಂಟಿ ಇ-ಮೇಲ್ ರವಾನಿಸಿರುವ ಟಿಕ್ ಟಾಕ್‌ನ ಜಾಗತಿಕ ಹಂಗಾಮಿ ಮುಖ್ಯಸ್ಥ ವನೆಸಾ ಪಪ್ಪಾಸ್ ಹಾಗೂ ಉಪಾಧ್ಯಕ್ಷ ಬ್ಲೇಕ್ ಚಾಂಡ್ಲೀ, ಕಂಪನಿಯು ತನ್ನ ತಂಡದ ಗಾತ್ರ ಇಳಿಸಲು ನಿರ್ಧಾರ ತೆಗೆದುಕೊಂಡಿದ್ದು ಇದು ಭಾರತದ ಎಲ್ಲ ಉದ್ಯೋಗಿಗಳ ಮೇಲೆ ಪರಿಣಾಮ ಬೀರಲಿದೆ ಎಂದಿದ್ದಾರೆ.

ಭಾರತದಲ್ಲಿರುವ ಉದ್ಯೋಗಿ ಗಳನ್ನು ಉದ್ಯೋಗದಿಂದ ತೆಗೆಯಲಾಗು ವುದು. ಕಾನೂನು, ಆಡಳಿತ, ಮಾನವ ಸಂಪನ್ಮೂಲ, ಲೆಕ್ಕಪತ್ರ ಸೇರಿದಂತೆ ಕೆಲವೇ ವಿಷಯಗಳಿಗಾಗಿ ಸೀಮಿತ ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಲಾಗುವುದು ಎಂದು ಮೂಲಗಳು ಹೇಳಿವೆ.

ಉದ್ಯೋಗಿಗಳಿಗೆ ಮೂರು ತಿಂಗಳ ವೇತನ ನೀಡುವ ಜೊತೆಗೆ ಅವರು ಕಾರ್ಯ ನಿರ್ವಹಿಸಿದ ವರ್ಷಗಳಿಗೆ ಅನುಗುಣವಾಗಿ ಹೆಚ್ಚುವರಿ ತಿಂಗಳ ವೇತನ ನೀಡಲಾಗುವುದು ಎಂದು ಇ-ಮೇಲ್‌ನಲ್ಲಿ ಹೇಳಲಾಗಿದೆ.

ನಾವು ಭಾರತದಲ್ಲಿ ಯಾವಾಗ ವಾಪಸ್ಸಾಗುತ್ತೇವೆ ಎಂಬುದು ಗೊತ್ತಿಲ್ಲ. ಆದರೆ, ಮುಂಬರುವ ದಿನಗಳಲ್ಲಿ ವಾಪಸ್ಸಾಗುವ ಬಯಕೆ ಹಾಗೂ ಬದ್ಧತೆ ಹೊಂದಿದ್ದೇವೆ ಎಂದು ಪಪ್ಪಾಸ್ ಹಾಗೂ ಚಾಂಡ್ಲೀ ಜಂಟಿ ಇ-ಮೇಲ್‌ನಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಜೂನ್ 29, 2020ರಲ್ಲಿ ಹೊರಡಿಸಿದ ಆದೇಶವನ್ನು ಪಾಲಿಸಲು ತ್ವರಿತವಾಗಿ ಕ್ರಮ ತೆಗೆದು ಕೊಳ್ಳುತ್ತಿದ್ದೇವೆ. ಆಪ್‌ಗಳನ್ನು ಸ್ಥಳೀಯ ಕಾನೂನು ಹಾಗೂ ನಿಯಂತ್ರಣಗಳಿಗೆ ಒಳಪಡಿಸುವಂತೆ ಶ್ರಮಿಸುತ್ತೇವೆ ಎಂದು ಟಿಕ್‌ಟಾಕ್ ವಕ್ತಾರರೊಬ್ಬರು ಹೇಳಿದ್ದಾರೆ.


## ಬಿಲ್ಡಿಂಗ್ ಬಾಡಿಗೆಗೆ ದೊರೆಯುತ್ತದೆ (Commercial Building)

ನಗರದ ಮಧ್ಯ ಭಾಗದಲ್ಲಿರುವ ಬಾಪೂಜಿ ಹೈಸ್ಕೂಲ್ ಹತ್ತಿರ (Old R.T.O. Office Road) ವಾಣಿಜ್ಯೋದ್ಯಮಕ್ಕೆ ಉಪಯೋಗವಾಗುವ ಸೂಕ್ತವಾದ ಬಿಲ್ಡಿಂಗ್ ಯಾವುದೇ **ಬ್ಯಾಂಕ್, ಆಫೀಸ್, ವಿದ್ಯಾಕೇಂದ್ರ, ಸಾಫ್ಟ್‌ವೇರ್ ಆಫೀಸ್**, ಒಂದೇ ಸೂರಿನಡಿ Scaning, Testing Centre ನರ್ಸಿಂಗ್ ಕಾಲೇಜ್, Food Mart ಹಾಗೂ ಯಾವುದೇ ಪದವಿ ಕಾಲೇಜ್ MBA, M.Tech ಕಾಲೇಜ್ ಪ್ರಾರಂಭಿಸಲು ಸೂಕ್ತವಾದ ಬಿಲ್ಡಿಂಗ್ ಬಾಡಿಗೆಗೆ ದೊರೆಯುತ್ತದೆ. (Approximate (16500 Sq feet)

* Celler - 1600 Sq feet
* Ground - 4600 Sq feet
* First - 3500 Sq feet
* Second - 3500 Sq feet
* Third - 3500 Sq feet

ಸಂಪರ್ಕಿಸಿ :

**98444 06030, 98860 66977**

## ಸಿ.ಕೆ. ಆನಂದ ತೀರ್ಥಾಚಾರ್ ಅವರ 'ಸಂಸ್ಕಾರ ಸೌರಭ' ಪುಸ್ತಕ ಬಿಡುಗಡೆ



ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಆಶ್ರಯದಲ್ಲಿ ಜ್ಯೋತಿಷಿಯೂ ಆಗಿರುವ ಪತ್ರಿಕಾ ಅಂಕಣಕಾರ ಡಾ. ಸಿ.ಕೆ.ಆನಂದತೀರ್ಥಾಚಾರ್ ಅವರು ಸಂಗ್ರಹಿಸಿ ಬರೆದಿರುವ ಸಂಸ್ಕಾರಗಳ ಹಿನ್ನೆಲೆ ಮತ್ತು ಮುಹೂರ್ತ ಭಾಗದ 'ಸಂಸ್ಕಾರ ಸೌರಭ' ಪುಸ್ತಕ ಇಂದು ಬೆಳಿಗ್ಗೆ 10-30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಆವರಗೊಳ್ಳದ ಶ್ರೀ ಓಂಕಾರೇಶ್ವರ ಶಿವಾಚಾರ್ಯ ಸ್ವಾಮೀಜಿ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಕೃತಿಯ ಸಂಗ್ರಹಕಾರ ಆನಂದತೀರ್ಥಾಚಾರ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಪುಸ್ತಕದ ಪರಿಚಯವನ್ನು ಕರ್ನಾಟಕ ರಾಜ್ಯ ಜ್ಯೋತಿಷ್ಯ ಹಾಗೂ ಜ್ಯೋತಿಷ್ಯ ಭೋದನೆಗಳ ಒಕ್ಕೂಟದ ಕಾರ್ಯದರ್ಶಿ ಬಿ.ಗಜೇಂದ್ರ ಮಾಡಲಿದ್ದಾರೆ.

**ನಗರದಲ್ಲಿ ಇಂದು**

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಭಾಸ್ಕಾರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಅಧ್ಯಕ್ಷ ಎಂ. ಗದಿಗೆಪ್ಪಯ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್.ಮಂಜುನಾಥ ಕುರ್ಕಿ, ರಾಜ್ಯ ಜ್ಯೋತಿಷ್ಯ ಹಾಗೂ ಜ್ಯೋತಿಷ್ಯ ಭೋದನೆಗಳ ಒಕ್ಕೂಟದ ಖಜಾಂಚಿ ಡಾ. ಅನಂತ ರಾಘವನ್, ಜ್ಯೋತಿರ್ವಿಜ್ಞಾನ ಮಾಸಪತ್ರಿಕೆ ಸಂಪಾದಕ ವಿದ್ವಾನ್ ಗಣೇಶ್ ಹೆಗಡೆ ಆಗಮಿಸಲಿದ್ದಾರೆ ಎಂದು ಪ್ರತಿಷ್ಠಾನದ ಖಜಾಂಚಿ ಆರ್.ಬಿ. ಪ್ರವೀಣ್‌ಕುಮಾರ್ ತಿಳಿಸಿದ್ದಾರೆ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಗೋಷ್ಠಿ

ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶಿವಾನುಭವ ಗೋಷ್ಠಿ ಕಾರ್ಯಕ್ರಮ ನಡೆಯಲಿದೆ ಎಂದು ಆಶ್ರಮದ ಕಾರ್ಯದರ್ಶಿ ಎ.ಹೆಚ್.ಶಿವಮೂರ್ತಿಸ್ವಾಮಿ ತಿಳಿಸಿದ್ದಾರೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ಆಶ್ರಮದ ಅಧ್ಯಕ್ಷ ಅಥಣಿ ವೀರಣ್ಣ ಅವರು ವಹಿಸುವರು.

# ಕೋವಿಡ್ ಸಂಕಷ್ಟದಲ್ಲೂ ಸರ್ಕಾರ ಅಭಿವೃದ್ಧಿಗೆ ಒತ್ತು



ಜಗಳೂರು, ಜ. 27- ಕೊವಿಡ್ ಸಂಕಷ್ಟದಲ್ಲೂ ಮುಖ್ಯಮಂತ್ರಿ ಯಡಿ ಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ನೀರಾವರಿ ಸೇರಿದಂತೆ, ಅಭಿವೃದ್ಧಿ ಕಾಮಗಾರಿಗೆ ಒತ್ತು ನೀಡಿದೆ ಎಂದು ರಾಜ್ಯ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ಪಟ್ಟಣದ ಗುರುಭವನದ ಆವರಣದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾಮಗಾರಿಗಳ ಉದ್ಘಾಟನೆ ಮತ್ತು ಸರ್ಕಾರಿ ಸೌಲಭ್ಯಗಳ ವಿತರಣೆಯ ಜನಸ್ಪಂದನ ಸಮಾರಂಭದಲ್ಲಿ ಅವರು ಮಾತನಾಡಿದರು.

ಜಿಲ್ಲಾಡಳಿತ ಜನಸ್ಪಂದನ ಕಾರ್ಯಕ್ರಮದ ಮೂಲಕ ಉತ್ತಮವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಕೆರೆ ತಂಬಿಸುವ ಮತ್ತು ಭದ್ರಾ ನೀರಾವರಿ ಯೋಜನೆ ಸೌಲಭ್ಯದಿಂದ ಬರದ ನಾಡಿನ ರೈತರಿಗೆ ನೆಮ್ಮದಿ ದೊರೆಯಲಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ರಾಷ್ಟ್ರೀಯ ನೀರಾವರಿ ಯೋಜನೆಯಾಗಿ ಭದ್ರಾ ಮೇಲ್ದಂಡೆ ಯೋಜನೆ ಸೇರ್ಪಡೆಗೊಂಡಿದೆ. ಅಲ್ಲದೆ 57 ಕೆರೆ ನೀರು ತುಂಬಿಸುವ ಯೋಜನೆ ಯಲ್ಲಿ ಶೀಘ್ರ ದಲ್ಲಿ ನೀರು ಹರಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ.ಜಾತಿ ಮತ್ತು ಪ.ಪಂಗಡ ಸಮುದಾಯ ಹೆಚ್ಚಾಗಿರುವ ತಾಲ್ಲೂಕಿನ ರೈತರಿಗೆ ನೀರಾವರಿ ವರದಾನವಾಗಿದೆ. ಇಲ್ಲಿನ ಜನತೆ ಆರ್ಥಿಕ ಸದೃಢರಾಗಿ ಮಕ್ಕಳ ಭವಿಷ್ಯಕ್ಕೆ ಸಹಕಾರಿಯಾಗಲಿದೆ ಎಂದರು.

ಶಾಸಕ ಎಸ್.ವಿ. ರಾಮಚಂದ್ರ ಅವರು 2 ವರ್ಷದೊಳಗೆ 500 ಕೋಟಿ ರೂ. ಅನುದಾನ ತಂದಿದ್ದಾರೆ. ಇನ್ನು 3 ವರ್ಷಗಳಲ್ಲಿ 3,000 ಕೋಟಿ ಅನುದಾನದ ಸರದಾರ ಆಗುವುದರಲ್ಲಿ ಅನುಮಾನವಿಲ್ಲ ಎಂದು ಬಣ್ಣಿಸಿದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ತಾಲ್ಲೂಕಿನಲ್ಲಿ ನೀರು-ಸೂರು ಕಲ್ಪಿಸುವುದು ನನ್ನ ಗುರಿಯಾಗಿತ್ತು. ಅದರಂತೆ ಮುಖ್ಯಮಂತ್ರಿ ಯಡಿಯೂರಪ್ಪನವರ ಬಳಿ ಮನವಿ ಮಾಡಿದ ಫಲವಾಗಿ ತಾಲ್ಲೂಕಿನಲ್ಲಿ ನೀರಾವರಿ ಕನಸು ನನಸಾಗುವ ಹಂತದಲ್ಲಿದೆ ಎಂದರು.

ಬಿದರಕೆರೆ ಗ್ರಾಮದಲ್ಲಿ ನೂತನ ಪಶು ಚಿಕಿತ್ಸಾಲಯ ಕಟ್ಟಡ ವಿನ್ಯಾಸ 35 ಲಕ್ಷ ರೂ., ಪಟ್ಟಣದಲ್ಲಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ 2ಕೋಟಿ 78 ಲಕ್ಷ ರೂ., ಪಲ್ಲಾಗಟ್ಟೆಯಲ್ಲಿ ದೇವರಾಜ ಅರಸು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ 3 ಕೋಟಿ 25 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನಡೆಸಲಾಗಿದೆ ಎಂದು ತಿಳಿಸಿದರು.

**ಜಗಳೂರಿನ ಜನಸ್ಪಂದನ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್**

**ಬಸ್ ಡಿಪೋ ಜಮೀನು ಮಂಜೂರು:** ಜಿಲ್ಲಾಧಿಕಾರಿಗಳ ಕಾಳಜಿಯಿಂದ ಪಟ್ಟಣದಲ್ಲಿ ಸರ್ವೆ ನಂ.51 ರಲ್ಲಿ 4.31 ಎಕರೆ ಜಮೀನಿನಲ್ಲಿ ಕೆಎಸ್ ಆರ್ ಟಿಸಿ ಬಸ್ ಡಿಪೋ ನಿರ್ಮಾಣಕ್ಕಾಗಿ ಸ್ಥಳ ಕಾಯ್ದಿರಿಸಲಾಗಿದೆ. ಜಮೀನನ್ನು ಕೆಎಸ್ ಆರ್ ಟಿಸಿ ಡಿಸಿಯವರಿಗೆ ಇಂದು ಹಸ್ತಾಂತರಗೊಳಿಸಿದೆ. ಶೀಘ್ರದಲ್ಲಿಯೇ ವಿದ್ಯಾರ್ಥಿಗಳ ಡಿಪೋ ಕನಸ್ಸು ನನಸಾಗಲಿದೆ ಎಂದರು.

ಸಮಾರಂಭದಲ್ಲಿ ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ ಸಿಇಓ ಪದ್ಮಾಬಸವಂತಪ್ಪ, ಎ.ಎಸ್.ಪಿ ರಾಜೀವ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಎಸ್. ವೇಣುಗೋಪಾಲ ರೆಡ್ಡಿ, ಪ.ಪಂ. ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಜಿ.ಪಂ ಸದಸ್ಯರಾದ ಎಸ್.ಕೆ. ಮಂಜುನಾಥ್, ರಶ್ಮಿ ರಾಜಪ್ಪ, ಉಮಾ ವೆಂಕಟೇಶ್, ತಾ.ಪಂ. ಸದಸ್ಯರಾದ ಸಿದ್ದೇಶ್, ಬಸವರಾಜ್, ಶಂಕರನಾಯ್ಕ, ತಹಶೀಲ್ದಾರ್ ಡಾ. ನಾಗವೇಣಿ, ತಾ.ಪಂ. ಇಓ ಮಲ್ಲಾನಾಯ್ಕ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ ಎಇ ರುದ್ರಪ್ಪ, ಬಿಇಓ ಸಿ.ಎಸ್. ವೆಂಕಟೇಶ್ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಉತ್ಸವಾಂಬದೇವಿ ಜಾತ್ರೋತ್ಸವ



ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗ ದಲ್ಲಿರುವ ಶ್ರೀ ಉತ್ಸವಾಂಬದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಜಾತ್ರಾ ಮಹೋತ್ಸವ ಇಂದು ಮತ್ತು ನಾಳೆ ನಡೆಯಲಿದೆ.

ನಾಳೆ ಗುರುವಾರ ಬೆಳಗಿನ ಜಾವ 4.30 ಕ್ಕೆ ಅಮ್ಮನವರಿಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ವಿಶೇಷ ಪುಷ್ಪಾಲಂಕಾರ ಪೂಜೆ, ಬೆಳಿಗ್ಗೆ 9.30 ಕ್ಕೆ ಭಕ್ತಾದಿಗಳಿಂದ ಉಡಿ ಅಕ್ಕಿ ಸೇವೆ ನಂತರ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗ ವಿರುತ್ತದೆ ಮತ್ತು ಸಂಜೆ 5.30 ಕ್ಕೆ ಶ್ರೀ ಉತ್ಸವಾಂಬ ದೇವಿಯ ಮೆರವಣಿಗೆ ನಡೆಯುವುದು ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಶಿವಾಜಿ ಜಯಂತಿ : ನಗರದಲ್ಲಿ ಇಂದು ಮರಾಠ ಸಮಾಜ ಸಭೆ



ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮತ್ತು ಸಮಾಜ ಬಾಂಧವರ ಸಭೆಯನ್ನು ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್ ನಲ್ಲಿರುವ ಶ್ರೀ ಕೃಷ್ಣಾಭವಾನಿ ಸಭಾ ಭವನದಲ್ಲಿ ಇಂದು ಸಂಜೆ 4.30ಕ್ಕೆ ಕರೆಯಲಾಗಿದೆ ಎಂದು ಸಂಘದ ಕಾರ್ಯದರ್ಶಿ ಯಲ್ಲಪ್ಪ ಢಮಾಳೆ ತಿಳಿಸಿದ್ದಾರೆ.

ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವ ಕಾರ್ಯಕ್ರಮ ವನ್ನು ಆಚರಿಸುವ ಸಂಬಂಧ ಸಮಾಜದ ಅಧ್ಯಕ್ಷ ಡಿ.ಮಾಲತೇಶ ರಾವ್ ಜಾಧವ್ ಅವರ ಅಧ್ಯಕ್ಷತೆ ಯಲ್ಲಿ ಈ ಸಭೆಯನ್ನು ಕರೆಯಲಾಗಿದೆ ಎಂದು ಅವರು ಹೇಳಿದ್ದಾರೆ.

## ಕೂಡಲಸಂಗಮ ಶ್ರೀ ಪಾದಯಾತ್ರೆ ಇಂದು ಹರಿಹರಕ್ಕೆ ಜಾಗೃತಿ ಸಭೆಯ ಸ್ಥಳ ಪರಿಶೀಲಿಸಿದ ಎಎಸ್ಪಿ ರಾಜೀವ್



ಹರಿಹರ, ಜ.27- ಕೂಡಲಸಂಗಮದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರ ಪಂಚಲಕ್ಷ ಪಾದಯಾತ್ರೆಯ ಐತಿಹಾಸಿಕ ಬೃಹತ್ ಜಾಗೃತಿ ಸಭೆಯು ಗುರುವಾರ ಸಂಜೆ ನಾಲ್ಕು ಗಂಟೆಗೆ ಗಾಂಧೀ ಮೈದಾನದಲ್ಲಿ ನಡೆಯಲಿದ್ದು, ಪೂರ್ವ ಸಿದ್ದತೆಯನ್ನು ಎಎಸ್‌ಪಿ ಎಂ. ರಾಜೀವ್ ವೀಕ್ಷಿಸಿ, ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿರುವ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಅವರಿಂದ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ವೇದಿಕೆಯ ಹಂದರಗಂಬ ಪೂಜೆ ನೆರವೇರಿಸಿ ಮಾತನಾಡಿದ ಶಿವಶಂಕರ್ ಅವರು, ಶ್ರೀಗಳು ಹರಪನಹಳ್ಳಿ ತಾಲ್ಲೂಕಿನ ತೆಲಿಗಿಯಿಂದ ಹೊರಟು ಹರಿಹರಕ್ಕೆ ಸಂಜೆ ನಾಲ್ಕು ಗಂಟೆಗೆ ತಲುಪಲಿದ್ದಾರೆ. ಅವರನ್ನು ಗುತ್ತೂರಿನ ಸತ್ಯ ಗಣಪತಿ ದೇವಸ್ಥಾನದಿಂದ ಸ್ವಾಗತಿಸಿಕೊಂಡು ಕುಂಭ ಮೇಳ, ಸಮಾಳ. ಭಾಜಾ ಭಜಂತ್ರಿ, ನಂದಿಕೋಲು, ಆನೆ ಅಂಬಾರಿ, ಜೋಡೆತ್ತುಗಳ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಗುವುದು.

ಗಾಂಧಿ ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬರುವ ಸುಮಾರು 8 ರಿಂದ 10 ಸಾವಿರ ಭಕ್ತರಿಗಾಗಿ ಆಸನಗಳ ವ್ಯವಸ್ಥೆ ಮಾಡಲಾಗುವುದು. 30x70 ಅಳತೆಯ ಬೃಹತ್ ವೇದಿಕೆಯನ್ನು ಸಿದ್ದಪಡಿಸಲಾಗುವುದು. ಬಂದ ಭಕ್ತಾದಿಗಳಿಗೆ 10 ಊಟದ ಕೌಂಟರ್‌ಗಳನ್ನು ಮಾಡಲಾಗುವುದು. ಶ್ರೀಗಳು ರಾಘವೇಂದ್ರ ಮಠದಲ್ಲಿ ತಮ್ಮ ವಾಸ್ತವ್ಯ ಮಾಡಲಿದ್ದು, ಅಲ್ಲಿಯೂ ಸಹ ಎಲ್ಲಾ ರೀತಿಯ ಪೂರ್ವ ಸಿದ್ದತೆ ಮಾಡಲಾಗಿದೆ.

ಹೆಚ್ಚುವರಿ ಸಹಾಯಕ ಪೊಲೀಸ್ ಅಧಿಕಾರಿ ಎಂ. ರಾಜೀವ್, ಸಿಪಿಐ ಸತೀಶ್‌ಕುಮಾರ್, ಪಿಎಸ್‌ಐ ರವಿಕುಮಾರ್, ಡಿ, ಬಸವರಾಜ್ ಸುನೀಲ್ ತೇಲಿ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು. ಸಮಾಜದ ಮುಖಂಡರಾದ ಎಂ.ಜಿ ನಾಗನಗೌಡ್ರು, ಹೊಸಳ್ಳಿ ನಾಗಪ್ಪ, ಕಮಲಾಪುರದ ಶಿವನಗೌಡ, ಬಸವರಾಜ್ ಪೂಜಾರ್, ಕುಮಾರ್ ಹೊಳೆಸಿರಿಗೆರೆ, ನಗರಸಭೆ ಸದಸ್ಯ ಪಿ.ಎನ್. ವಿರುಪಾಕ್ಷ, ಜಿ. ನಂಜಪ್ಪ, ಫೈನಾನ್ಸ್ ಮಂಜುನಾಥ್, ಚೂರಿ ಜಗದೀಶ್, ಮಂಜುನಾಥ್ ದೇಸಾಯಿ, ಅಲ್ತಾಫ್, ಸುರೇಶ್ ಹಾದಿಮನಿ, ಗೌಡ್ರುಪುಟ್ಟಪ್ಪ, ನೆಲ್ಲಿ ಬಸವರಾಜ್, ಕತ್ತಲಗೆರೆ ರಾಜು, ಕಲ್ಲಯ್ಯ, ಪ್ರೇಮ್ ಕುಮಾರ್, ಲತಾ ಕೊಟ್ರೇಶ್, ರಾಗಿಣಿ ಪ್ರಕಾಶ್, ಜಯ್ಯಮ್ಮ, ಉಮಾ, ಗಾಯತ್ರಮ್ಮ, ರುದ್ರಮ್ಮ, ನೀಲಮ್ಮ ಹಾಗೂ ಮತ್ತಿತರರಿದ್ದರು.

## ಮುಂಬೈ ಕೇಂದ್ರಾಡಳಿತ ಮಾಡಿ

ಮುಂಬೈ/ಬೆಂಗಳೂರು, ಜ. 27 – ಕರ್ನಾಟಕದಲ್ಲಿ ಮರಾಠಿಗರು ಹೆಚ್ಚಾಗಿರುವ ಗಡಿ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಬೇಕು ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಉದ್ಧವ್ ಠಾಕ್ರೆ ಹೇಳಿಕೆಗೆ ತಿರುಗೇಟು ನೀಡಿರುವ ಕರ್ನಾಟಕದ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಮುಂಬೈ ಅನ್ನು ಕರ್ನಾಟಕಕ್ಕೆ ಸೇರಿಸಬೇಕು. ಅಲ್ಲಿಯವರೆಗೂ ಮುಂಬೈ ಅನ್ನು ಕೇಂದ್ರಾಡಳಿತ ಪ್ರದೇಶವಾಗಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ನಾವು ಮಹಾರಾಷ್ಟ್ರ ಮುಖ್ಯಮಂತ್ರಿ ಹೇಳಿಕೆಯನ್ನು ಖಂಡಿಸುತ್ತೇವೆ. ಮಹಾಜನ್ ವರದಿಯೇ ಅಂತಿಮ. ಸುಪ್ರೀಂ ಕೋರ್ಟ್‌ನಲ್ಲೂ ನಮ್ಮ ಪರವಾಗಿ ತೀರ್ಪು ಬರುವ ವಿಶ್ವಾಸವಿದೆ ಎಂದಿದ್ದಾರೆ.

ನಾವು ಮುಂಬೈ - ಕರ್ನಾಟಕದ ಭಾಗವಾಗಿದ್ದೇವೆ. ಹೀಗಾಗಿ ನಮಗೂ ಮುಂಬೈ ಮೇಲೆ ಅಧಿಕಾರವಿದೆ. ಇನ್ನು ಮುಂದೆ ನಾವು ಮುಂಬೈ ಅನ್ನೂ ಕರ್ನಾಟಕದ ಭಾಗವಾಗಿ ಮಾಡಬೇಕು, ನಮಗೂ ಅದರಲ್ಲಿ ಪಾಲಿದೆ ಎಂದು ಕೇಳಲು ಆರಂಭಿಸುತ್ತೇವೆ. ಮುಂಬೈ ಕರ್ನಾಟಕದ ಭಾಗವಾಗುವವರೆಗೂ ಅದನ್ನು ಕೇಂದ್ರಾಡಳಿತ ಪ್ರದೇಶ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುತ್ತೇವೆ ಎಂದು ಸವದಿ ತಿಳಿಸಿದ್ದಾರೆ.

ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಪುಸ್ತಕವೊಂದನ್ನು ಬಿಡುಗಡೆ ಮಾಡುವ ಸಮಾರಂಭದಲ್ಲಿ ಮಾತನಾಡುತ್ತಿದ್ದ ಠಾಕ್ರೆ, ಕರ್ನಾಟಕದ ಭಾಗಗಳನ್ನು ಮಹಾರಾಷ್ಟ್ರದಲ್ಲಿ ಸೇರಿಸಿಕೊಳ್ಳಲು ಹೋರಾಟ ನಡೆಸುವ ಅಗತ್ಯವಿದೆ ಎಂದಿದ್ದಾರೆ.

**ಕರ್ನಾಟಕದ ಮರಾಠಿಗರ ಪ್ರದೇಶ ಕೇಂದ್ರಾಡಳಿತವಾಗಲಿ ಎಂದ ಉದ್ಧವ್ ಠಾಕ್ರೆಗೆ ಸವದಿ ತಿರುಗೇಟು**

ಸುಪ್ರೀಂ ಕೋರ್ಟ್‌ನಲ್ಲಿ ಗಡಿ ವಿವಾದದ ವಿಚಾರಣೆ ನಡೆಸುತ್ತಿರುವಾಗಲೇ ಬೆಳಗಾವಿಯ ಹೆಸರನ್ನು ಬದಲಿಸಲಾಗಿದೆ. ಅದನ್ನು ಎರಡನೇ ರಾಜಧಾನಿ ಮಾಡಲಾಗಿದೆ, ಅಲ್ಲಿ ಶಾಸಕಾಂಗ ಭವನ ಕಟ್ಟಲಾಗಿದೆ. ಇದು ನ್ಯಾಯಾಂಗ ನಿಂದನೆ ಎಂದು ಠಾಕ್ರೆ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪು ನೀಡುವವರೆಗೆ 'ಕರ್ನಾಟಕ ವಶಪಡಿಸಿಕೊಂಡಿರುವ ಮರಾಠಿ ಮಾತನಾಡುವ ಜನರ ಪ್ರದೇಶ'ವನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಬೇಕು ಎಂದವರು ಒತ್ತಾಯಿಸಿದ್ದಾರೆ.

ಕರ್ನಾಟಕದಲ್ಲಿ ಯಾವುದೇ ರಾಜಕೀಯ ಪಕ್ಷ ಸರ್ಕಾರಕ್ಕೆ ಬಂದರೂ, ಯಾವುದೇ ಮುಖ್ಯಮಂತ್ರಿ ಅಧಿಕಾರದಲ್ಲಿದ್ದರೂ ಮರಾಠಿಗರು ಹಾಗೂ ಮರಾಠಿ ಭಾಷೆಯ ಮೇಲೆ ದೌರ್ಜನ್ಯ ನಡೆಯುವುದು ಸಾಮಾನ್ಯವಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

## ಜಿ.ಪಂ.ಅಧ್ಯಕ್ಷರಿಂದ ದಿಢೀರ್ ಜಿಲ್ಲಾಸ್ಪತ್ರೆ ಭೇಟಿ



ದಾವಣಗೆರೆ, ಜ.27 - ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಬುಧವಾರ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ ಅವರು ಇಂದು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಡಿ ಗ್ರೂಪ್ ನೌಕರರಿಗೆ ಕನಿಷ್ಟ ವೇತನ ರೂ.12,473 ಇದೆ. ಆದರೆ ಸಿ.ಜಿ. ಆಸ್ಪತ್ರೆಯಲ್ಲಿ ಈ ನೌಕರರಿಗೆ ರೂ. 5 ರಿಂದ 6 ಸಾವಿರ ನೀಡುತ್ತಿದ್ದಾರೆ ಎಂದು ನೌಕರರ ಸಂಘದ ಅಧ್ಯಕ್ಷರು ಜಿ.ಪಂ. ಅಧ್ಯಕ್ಷರ ಗಮನಕ್ಕೆ ತಂದರು.

ನಾನ್‌ಕ್ಲಿನಿಕಲ್ ಸಿಬ್ಬಂದಿಗಳಿಗೆ ಕನಿಷ್ಟ ವೇತನ ರೂ.15,073 ಇದ್ದು, ರೂ. 8 ರಿಂದ 9 ಸಾವಿರ ಸಂಬಳ ನೀಡುತ್ತಿದ್ದಾರೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಕೆಲಸದಿಂದ ತೆಗೆಯುವುದಾಗಿ ಬೆದರಿಸುತ್ತಾರೆಂದು ನೌಕರರು ದೂರಿದರು.

ಎಲ್ಲರ ಸಮಸ್ಯೆ ಆಲಿಸಿದ ಜಿ.ಪಂ. ಅಧ್ಯಕ್ಷರು ಜಿಲ್ಲಾಸ್ಪತ್ರೆ ಅಧೀಕ್ಷಕರನ್ನು ಸ್ಥಳಕ್ಕೆ ಕರೆಸಿ ಇಂತಹ ತಪ್ಪುಗಳು ಮುಂದೆ ಮರುಕಳಿಸಬಾರದು. ನೌಕರರಿಗೆ ಸರಿಯಾದ ಸಂಬಳವನ್ನು ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ನೀಡಬೇಕು ಹಾಗೂ ಸುಮಾರು 20 ವರ್ಷಗಳಿಂದ ದುಡಿಯುತ್ತಿರುವ ನೌಕರರನ್ನು ಯಾವುದೇ ಕಾರಣಕ್ಕೆ ತೆಗೆಯಬಾರದೆಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆಸ್ಪತ್ರೆ ಅಧೀಕ್ಷಕ ಡಾ.ಜಯಪ್ರಕಾಶ್, ಸಹಾಯಕ ಆಡಳಿತಾಧಿಕಾರಿ ರಹೀಂ ಖಾನ್ ಹಾಗೂ ನೌಕರರು ಇದ್ದರು.

## ನಗರದಲ್ಲಿಂದು ಉದ್ಯೋಗ ಮೇಳ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾಗೂ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಎಆರ್‌ಜಿ ಕಾಲೇಜಿನಲ್ಲಿ ಉದ್ಯೋಗ ಮೇಳ ನಡೆಯಲಿದೆ. ಉದ್ಯೋಗ ಮೇಳದಲ್ಲಿ ಹಲವು ಖಾಸಗಿ ಕಂಪನಿಗಳು ಭಾಗವಹಿಸುತ್ತಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದ ಆಸಕ್ತ ಅಭ್ಯರ್ಥಿಗಳು ಅಂದು ಬಯೋಡೆಟಾ ಮತ್ತು ಆಧಾರ್ ಕಾರ್ಡ್‌ನ ಹತ್ತು ಪ್ರತಿಗಳೊಂದಿಗೆ ಭಾಗವಹಿಸುವಂತೆ ಉದ್ಯೋಗಾಧಿಕಾರಿ ಕೆ. ಎಸ್. ಗಿರೀಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ದೂರವಾಣಿ 08192-259446, 63615 50016, 97436 63369.

## ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಠಕ್ಕೆ ನೇಮಕ





ದಾವಣಗೆರೆ, ಜ.27 - ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಠದ ಸಂಚಾಲಕರನ್ನಾಗಿ ಹೆಚ್. ದಿವಾಕರ್, ಸಹ ಸಂಚಾಲಕರನ್ನಾಗಿ ಕೆ.ಹೆಚ್ ಧನಂಜಯ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ತಿಳಿಸಿದ್ದಾರೆ.

ಸದಸ್ಯರುಗಳಾಗಿ ಮನೋಹರ್ ಎಸ್ ಮಹೇಂದ್ರಕರ್, ಶ್ರೀಮತಿ ವಸುಂಧರಾ, ಚಂದ್ರಶೇಖರ್, ಕೆ.ಇ ಮಂಜಣ್ಣ, ಕೆ.ಎಸ್. ವೀರೇಶ್, ದೊರೆಸ್ವಾಮಿ ಎಂ.ಬಿ, ಎ.ಕೆ ಹಾಲಪ್ಪ ನೇಮಕಗೊಂಡಿದ್ದಾರೆ.




## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಬನದ ಹುಣ್ಣಿಮೆ ಪೂಜೆ



ದಾವಣಗೆರೆ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಅಂಗವಾಗಿ ಇಂದು ವಿಶೇಷ ಪೂಜಾ ಕಾರ್ಯಕ್ರಮಗಳು ಏರ್ಪಾಡಾಗಿವೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಹೋಮ, ಹವನ, ಶ್ರೀ ಸತ್ಯನಾರಾಯಣ ಪೂಜಾ ಕಥಾ, ಪಲ್ಲಕ್ಕಿ ಉತ್ಸವ, ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಜರುಗಲಿದೆ. ಗುತ್ತಿದುರ್ಗದ ದಿ. ಶ್ರೀಮತಿ ನಾಗರತ್ನಮ್ಮ ಮತ್ತು ದಿ. ನೀಲಕಂಠಪ್ಪ ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ನಗರದಲ್ಲಿ ಇಂದು ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಬನದ ಹುಣ್ಣಿಮೆ ಅಂಗವಾಗಿ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ|| ಸುಶೀಲಮ್ಮ ತಿಳಿಸಿದ್ದಾರೆ. ವಿ. ವೀರಭದ್ರಪ್ಪ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte